ಬಗ್ಗೆ ಚರ್ಚೆ ಮಾಡಲು ಅನುಕೂಲವಾಗುತ್ತದೆ, ಆದ್ದರಿಂದ ಸ್ಟೇಟ್‌ಮೆಂಟ್ ಆದಮೇಲೆ ಚರ್ಚೆ ಮಾಡುವುದರಿಂದ ಅನುಕೂಲವಾಗುತ್ತದೆ. ಮತ್ತು ನಾವು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಏಕಾ ಏಕಿ ಇದನ್ನು ವಜ ಮಾಡುವುದರ ಬದಲು ಜೀವಂತವಾಗಿಟ್ಟು ಮಾನ್ಯ ಸಂಸದೀಯ ಮಂತ್ರಿಗಳು ಸಲಹೆ ಮಾಡಿದಂತೆ ಬೇರೆ ಮಾರ್ಗವಾದ, ಬೇರೆ ದಿನ ಚರ್ಚೆಗೆ ಅವಕಾಶ ಮಾಡಿಕೊಡಿ. ಹಾಗೆ ಚರ್ಚೆ ಮಾಡುವಮೊದಲು ಬೇಕಾಗಿರತಕ್ಕ ಮಾಹಿತಿಯನ್ನು ಸರ್ಕಾರದವರು ಒದಗಿಸಿಕೊಡಬೇಕು ಎಂದು ತಾವು ಆದೇಶವನ್ನು ನೀಡಿದರೆ ಒಳ್ಳೆಯದು.

೨. ರೇಷ್ಮೆ ಬೆಲೆಕುಸಿತ ಇತರ ಅವಶ್ಯಕ ಬೆಲೆಗಳ ಹೆಚ್ಚಳ:-

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸನ್ಮಾನ್ಯ ಅಧ್ಯಕ್ಷರೆ, ರೇಷ್ಮೆಗೂಡಿನ ಬಗ್ಗೆ ದೀರ್ಘವಾಗಿ ಮಾತನಾಡಬೇಕಾಗಿದೆ. ಅದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳಬೇಕೆಂದು. ನಾವು ಮನವಿ ಮಾಡಿದ್ದೇವೆ. ನಾನು ಮತ್ತೆ ಶ್ರೀ ರಾಮಯ್ಯನವರು ಅದರ ಬಗ್ಗೆ ಸ್ವಲ್ಪ ದೀರ್ಘವಾಗಿ ಮಾತನಾಡಬೇಕಾಗಿದೆ. ಅದಕ್ಕಿಂತ ಮೊದಲು ನಾನು ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ಅದರಲ್ಲಿಯೂ ವಿಶೇಷವಾಗಿ ಮುಖ್ಯಮಂತ್ರಿಗಳ ಮತ್ತು ಆಹಾರ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಈಗ ಏನಾಗಿದೆ ಎಂದರೆ ಪ್ರತಿನಿತ್ಯವು ಕೇಂದ್ರ ಸರ್ಕಾರದವರು ಒಂದಲ್ಲಾ ಒಂದು ವಸ್ತುವಿನ ಬೆಲೆಯನ್ನು ಹೆಚ್ಚು ಮಾಡತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರು ರೈಲ್ವೆ ಬೆಲೆಯನ್ನು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಜಾಸ್ತಿ ಮಾಡುತ್ತೇವೆ ಎನ್ನತಕ್ಕ ಸೂಚನೆಯನ್ನು ಈಗಾಗಲೆ ಕೊಟ್ಟಿದ್ದಾರೆ. ಕಳೆದ ತಿಂಗಳು ಅಕ್ಕಿಯ ಬೆಲೆಯನ್ನು ಜಾಸ್ತಿ ಮಾಡಿದರು. ತಮಗೆ ಗೊತ್ತಿರುವ ಹಾಗೆ ಗ್ರೀನ್ ಕಾರ್ಡ್‌ದಾರರಿಗೆ ಕೊಡುತ್ತಿದ್ದ ಅಕ್ಕಿಯ ಬೆಲೆಯು ೨ ರೂ. ಇತ್ತು ಅದು ಈಗ ೫-೬೦ ರೂ. ಆಗಿದೆ. ಇವತ್ತು ತರೆದ ಮಾರುಕಟ್ಟೆಯಲ್ಲಿ ಸಿಗತಕ್ಕಂಥ ಅಕ್ಕಿಗೂ ನ್ಯಾಯ ಬೆಲೆ ಅಗಂಡಿಗಳಲ್ಲಿ, ಡಿಪೋಗಳಲ್ಲಿ ಕೊಡತಕ್ಕ ಅಕ್ಕಿಗೂ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಇವತ್ತು ಏಕಾ ಏಕಿ, ರಾತ್ರೋರಾತ್ರಿ ರಾಜ್ಯ ಸರ್ಕಾರದವರು, ಕರ್ನಾಟಕ ರಾಜ್ಯ ಸರ್ಕಾರದವರು ಬಸ್ಸ್‌ಗಳ ಬೆಲೆಗಳನ್ನು ಜಾಸ್ತಿ ಮಾಡುವುದಾಗಿ ಘೋಷಣೆ ಮಾಡಿದರು. ನಿನ್ನೆ ರಾತ್ರಿ ಕೇಂದ್ರ ಸರ್ಕಾರದವರು ಡೆಲ್ಲಿಯಲ್ಲಿ ಒಂದು ಪ್ರಸ್ ಸಮ್ಮೇಳನದಲ್ಲಿ ನಾಳೆ ಬೆಳಿಗ್ಗೆಯಿಂದ ಸಕ್ಕರೆಯ ಬೆಲೆಯನ್ನು ಕೆಜಿಗೆ ೧ ರೂ. ೪೦ ಪೈಸೆ ಜಾಸ್ತಿ ಮಾಡುತ್ತೇವೆಂದು ಘೋಷಣೆಮಾಡಿದ್ದಾರೆ. ಕೇಂದ್ರ ಸರ್ಕಾರದವರಿಗೇನಾದರೂ ಗ್ರಹಚಾರ ಬಂದಿದೆಯೋ ಅವರಿಗೆ ಏನಾದರೂ ಗ್ರಹಣ ಹಿಡಿದಿದೆಯೋ ನನಗಂತೂ ಅರ್ಥವಾಗುತ್ತಿಲ್ಲ. ಇದನ್ನು ನಾವು ಖಂಡನೆ ಮಾಡಬೇಕಾಗುತ್ತದೆ. ಇವತ್ತಿನಿಂದ ಸೊಸೈಟಿಗಳಲ್ಲಿ ಸಕ್ಕರೆಯ ಬೆಲೆ ೮ ರೂ. ೩೦ ಪೈಸೆ, ಅದು ಕೇವಲ ಹೇಳಿಕೊಳ್ಳಲು ಮಾತ್ರ, ಆದರೆ ಅವರು ೯ ರೂಪಾಯಿ ತೆಗೆದುಕೊಳ್ಳುತ್ತಾರೆ. ಕೇಂದ್ರ ಸರ್ಕಾರದವರು ಸಕ್ಕರೆ ಕಾರ್ಖಾನೆಗಳ ಮಾಲೀಕರ ಅನುಕೂಲಕ್ಕಾಗಿ ಈ ರೀತಿ ಮಾಡಿದ್ದಾರೆಂದು ಹೇಳುತ್ತೇನೆ. ಅದರ ಬಗ್ಗೆ ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಒಂದು ಕ್ವಿಂಟಾಲ್ ಸಕ್ಕರೆಗೆ ೫ ರೂಪಾಯನ್ನು ಜಾಸ್ತಿ ಮಾಡುತ್ತೇವೆಂದು ಮಂತ್ರಿಗಳಾದ ಮಾನ್ಯ ಕಲ್ಪನಾಥರೈರವರು ರೈತರಿಗೆ ಹೇಳಿದ್ದಾರೆ. ಆದರೆ ಇದರ ಹಿಂದೆ ಏನು ಪಿತೂರಿ ಇದೆ ಎಂದರೆ. . .

(ಮುಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿಮಗೆ ಜನ ೪೦ ವರ್ಷ ಅಧಿಕಾರವನ್ನು ಕೊಟ್ಟರೂ, ಅಕ್ಕಿ ಸಕ್ಕರೆ ಮತ್ತಿತರ ಆಹಾರಪದಾರ್ಥಗಳ ಬೆಲೆ ಜಾಸ್ತಿ ಮಾಡಿದ್ದೀರಿ, ಜನ ಸಾಯಬೇಕೆಂದು ಮಾಡಿದ್ದೀರಾ? ಅಧಿಕಾರ ಹೋಗುವಂಥ ಕಾಲದಲ್ಲಿ ಜನರನ್ನು ಪೂರ್ತಿ ಮುಗಿಸಬೇಕೆಂದು

ಮಾಡಿದ್ದೀರಾ? ಆಹಾರದ ಬೆಲೆ ಜಾಸ್ತಿ ಮಾಡಿದ್ದೀರಿ ಸಕ್ಕರೆ ಬೆಲೆ ಜಾಸ್ತಿ ಮಾಡಿದ್ದೀರಿ. ಅದೇ ರೀತಿ ಕಬ್ಬಿನ ಬೆಲೆ ಜಾಸ್ತಿ ಮಾಡಿದ್ದೀರಾ? ೨೫೦-೩೦೦ ರೂಪಾಯಿಗೆ ಭತ್ತವನ್ನು ಕ್ವಿಂಟಾಲಿಗೆ ಯಾರೂ ಕೊಳ್ಳುವವರಿಲ್ಲ. ಅಕ್ಕಿ ಬೆಲೆಮಾತ್ರ ಜಾಸ್ತಿ ಮಾಡಿದ್ದೀರಿ. ಎಣ್ಣೆ ಸಿಗುತ್ತಿಲ್ಲ. ನಿಮ್ಮದೇ ತಾನೆ ದೆಹಲಿ. ದೆಹಲಿ ನಮ್ಮದಲ್ಲವೆಂದು ಹೊರಗೆ ಬನ್ನಿ ನಿಮ್ಮ ಕೈಯ್ಯಲ್ಲಾಗದಿದ್ದರೆ ನಾವು ಮಾಡುತ್ತೇವೆ. ಜನರನ್ನು ಶೋಷಣೆ ಮಾಡಿ ಗೋಳು ಹೊಯ್ದುಕೊಂಡು ಜನರು ಕಣ್ಣೀರುಹಾಕತಕ್ಕಂತಹ ಪರಿಸ್ಥಿತಿಗೆ ದುಸ್ಥಿತಿಗೆ ತರುತ್ತಿದ್ದೀರಿ. ಇಲ್ಲೂ ಅದೇ ಸ್ಥಿತಿ ಅಲ್ಲೂ ಅದೇ ಸ್ಥಿತಿ. ದೇಶದಲ್ಲಿ ಯಾರೂ ಹೇಳುವವರು ಕೇಳುವವರು ಇಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಒಂದು ಕ್ವಿಂಟಾಲಿಗೆ ೫ ರೂಪಾಯಿ ಜಾಸ್ತಿ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಲೆವಿ ಷುಗರ್‌ಕೇನ್ ಕ್ವಾಂಟಮ್ ಕಡಿಮೆ ಮಾಡಿದ್ದಾರೆ. ಓಪನ್ ಮಾರುಕಟ್ಟೆಯಲ್ಲಿ ಜಾಸ್ತಿ ಮಾಡಲಿಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ೫೫-೪೫ ಪರ್ಸೆಂಟ್ ಇದ್ದುದನ್ನು ೪೫-೫೦ ಮಾಡಿದ್ದಾರೆ. ೪೦-೬೦ ಮುಂಚೆ ಇತ್ತು ಇದನ್ನು ಏಕೆ ಮಾಡಿದ್ದಾರೆ. ಖಂಡಿತವಾಗಿ ಕೇಂದ್ರ ಸರಕಾರ ಸಕ್ಕರೆ ಲಾಬಿಗೆ ಮಣಿದಿದೆ ಎಂದು ಹೇಳಬೇಕಾಗುತ್ತದೆ. ನಿಮ್ಮ ಪಾರ್ಟಿ ನಮ್ಮ ಪಾರ್ಟಿ, ಬಿಜೆಪಿ ಪಾರ್ಟಿ ಎನ್ನುವುದಕ್ಕಿಂತ ಹೆಚ್ಚಾಗಿ ಮುಖ್ಯವಾಗಿರತಕ್ಕಂಥಾದ್ದು ಸಾಮಾನ್ಯ ಜನರಿಗೆ ಇಷ್ಟು ದೊಡ್ಡ ದುಬಾರಿ ಬೆಲೆಯನ್ನು ಕೊಟ್ಟು ಜೀವನ ಮಾಡತಕ್ಕಂಥಾದ್ದು ಕಷ್ಟವಾಗುತ್ತದೆ ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಇದನ್ನು ತಕ್ಷಣ ಕೇಂದ್ರ ಸರಕಾರದ ಗಮನಕ್ಕೆ ತರಬೇಕಾಗತ್ತದೆ. ಮಾನ್ಯ ಕಲ್ಪನಾಥರಾಯ್‌ರವರನ್ನು, ಕೇಂದ್ರ ಸರಕಾರದ ಮಂತ್ರಿಗಳನ್ನು, ನಿಂದನೆ ಮಾಡುವುದರಿಂದ ಏನೂ ಸಾಧನೆ ಮಾಡುವುದಕ್ಕಾಗುವುದಿಲ್ಲವೆಂದು ನಾನು ಒಪ್ಪತ್ತೇನೆ. ಆದರ ಬದಲಾಗಿ ರಾಜ್ಯದ ಜನತೆಯ ಭಾವನೆಗಳನ್ನು, ಕೇಂದ್ರ ಸರಕಾರಕ್ಕೆ ತರತಕ್ಕಂಥಾದ್ದು ರಾಜ್ಯ ಸರಕಾರದ ಆಹಾರ ಇಲಾಖೆಯ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಕರ್ತವ್ಯವಾಗಿರುತ್ತದೆ. ಆ ಕಾರಣದಿಂದ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದರ ಬಗ್ಗೆ ಸರ್ವಾನುಮತದಿಂದ ರೆಸಲ್ಯೂಷನ್ ಪಾಸ್ ಮಾಡಿ ಕಳಿಸೋಣ. ಕೇಂದ್ರ ಈ ಅಗತ್ಯವಸ್ತುಗಳ ಬೆಲೆ ಏರಿಸಿರುವುದು ತಪ್ಪು ಇದೆ ಅದನ್ನು ವಾಪಸ್ ಪಡೆಯಬೇಕೆಂದು ಸರ್ವಾನುಮತದಿಂದ ರೆಸಲ್ಯೂಷನ್ ಮಾಡಿ ಕಳಿಸೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸಕ್ಕರೆ ಬೆಲೆಯನ್ನು ಜಾಸ್ತಿ ಮಾಡಿರತಕ್ಕಂಥಾದ್ದನ್ನು ಕೇಂದ್ರ ಸರಕಾರದ ಈ ಕಾರ್ಯಕ್ರಮವನ್ನು ಇಲ್ಲಿ ಖಂಡನೆ ಮಾಡೋಣ. ಇದೇ ರೀತಿ ಪೆಟ್ರೋಲ್, ಡೀಸೆಲ್ ಬೆಲೆ ರೈಲ್ವೆ ಬೆಲೆ ಎಲ್ಲಾ ಬೆಲೆಗಳನ್ನು ಹೆಚ್ಚು ಮಾಡಿಕೊಂಡು ಹೋದರೆ ಹೇಗೆ ಜನರು ಜೀವನ ಮಾಡಬೇಕು? ವಿಶ್ವ ಬ್ಯಾಂಕ್‌ನಿಂದ ಸಾಲ ತರುತ್ತಿದ್ದೇವೆ ಆರ್ಥಿಕ ನೀತಿಯನ್ನು ನಾವು ಸುಧಾರಣೆ ಮಾಡುತ್ತಿದ್ದೇವೆಂದು ಹೇಳಿಕೊಂಡು ೨ ವರ್ಷವಾಯಿತು ಸಾಮಾನ್ಯ ಜನಗಳಿಗೆ ಏನು ಸಿಕ್ಕಿದೆ ತಾವೇ ಯೋಜನೆ ಮಾಡಿ. ೫೦೦-೬೦೦, ಒಂದುಸಾವಿರ ಸಂಪಾದನೆ ಮಾಡುವ ಒಬ್ಬ ಮನುಷ್ಯನಿಗೆ ೨೦೦೦ ಪ್ರತಿ ತಿಂಗಳು ಸಂಪಾದನೆ ಮಾಡುವ ಒಬ್ಬ ಮನುಷ್ಯನಿಗೂ ಸಹ ಜೀವನ ಮಾಡುವುದು ಕಷ್ಟವಾಗಿದೆ. ಆ ಕಾರಣದಿಂದಾಗಿ ಈ ಸದನದಲ್ಲಿ ಬೆಲೆ ಏರಿಕೆ ಬಗ್ಗೆ ವಿಶೇಷವಾಗಿ ಸಕ್ಕರೆ ಬೆಲೆಯನ್ನು ಇವತ್ತು ಕೇಂದ್ರ ಸರಕಾರ ಮಾಡಿರತ್ಕಂಥಾದ್ದನ್ನು ಖಂಡನೆ ಮಾಡುತ್ತೇವೆ. ನೀವೇನು ಮಾಡಬೇಕೆಂದರೆ ಕೊನೆಯ ಪಕ್ಷ ರಾಜ್ಯ ಸರಕಾರದಿಂದ ನಿನ್ನೆವರೆಗೆ ಯಾವ ಬೆಲೆಯಲ್ಲಿ ಮಾರುತ್ತಿದ್ದರು ಆ ಬೆಲೆಯಲ್ಲಿ ಸಕ್ಕರೆಯನ್ನು ಮತ್ತು ಅಕ್ಕಿಯನ್ನು ಮಾರಲಿಕ್ಕೆ ಕ್ರಮ ಏಕೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲವೇ? ನಾವು ಮಾಡುತ್ತಿದ್ದೆವು. ನಮ್ಮ ಸರಕಾರ ಇದ್ದಂತಹ ಸಂದರ್ಭದಲ್ಲಿ ಕೇಂದ್ರ ಸರಕಾರ ಅಕ್ಕಿ ಕೊಡುತ್ತಿತ್ತು ನಾವು ರಾಜ್ಯಸರಕಾರದಿಂದ ಹಣವನ್ನು ಕೊಟ್ಟು ೨ ರೂಪಾಯಿಗೆ ಒಂದು ಕೆ.ಜಿ.ಯಂತೆ ಹಸಿರು ಕಾರ್ಡಿಗೆ ಅಕ್ಕಿಯನ್ನು ಮಾರುತ್ತಿದ್ದೆವು.

ಸುಮಾರು ೩೮ ಕೋಟಿ ಪ್ರತಿ ವರ್ಷ ಹಸಿರು ಕಾರ್ಡಿನ ಅಕ್ಕಿಗೆ ಸಬ್ಸಿಡಿ ಹಣವನ್ನು ನಾವು ಕೊಡುತ್ತಿದ್ದೆವು. ಅದೇ ರೀತಿಯಲ್ಲಿ ನೀವೇಕೆ ಅಕ್ಕಿ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಲ್ಲಿ ಏರಿಸುತ್ತಾರೆಂದು ಹೇಳಿದ ತಕ್ಷಣ ನಾವು ಇಲ್ಲಿ ಏರಿಸಬೇಕು ಎಂದು ಹೇಳುವುದು ಸರಿಯಲ್ಲ. ನಾನು ಒತ್ತಾಯ ಮಾಡುತ್ತಿದ್ದೇನೆ. ರಾಜ್ಯ ಸರಕಾರವು ಇದನ್ನು ಮಾಡಬೇಕು. ಕೇಂದ್ರ ಸರಕಾರ ಮಾಡಿರಲಿ ಅವರಿಗೆ ಗ್ರಹಣ ಹಿಡಿದಿದೆ, ಗ್ರಹಚಾರ ಬಂದಿದೆ, ಅವರು ಆ ರೀತಿ ಮಾಡುತ್ತಾರೆ ಅದು ಬೇರೆ ವಿಚಾರ. ರಾಜ್ಯಸರಕಾರದಿಂದ ಸಾಮಾನ್ಯವಾಗಿ ಜನರಿಗೆ ಉಪಯೋಗವಾಗತಕ್ಕಂತಹ ಈ ಎರಡು ಕೆಲಸವನ್ನು ಸಬ್ಸಿಡಿ ಹಣವನ್ನು ಕೊಟ್ಟು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನಾನು ತಮ್ಮ ಹತ್ತಿರ ಮಾತನಾಡಿದೆ. ಪ್ರತಿ ದಿನ ಬೆಲೆ ಏರಿಕೆಯಾಗುತ್ತಿದೆ. ಅನೇಕ ಸಾರಿ ಇದರ ಬಗ್ಗೆ ಹೇಳಿದೆ. ಹೋಟೆಲು ತಿಂಡಿ ಬೆಲೆ ಏರಿದೆ ಎಂದು ಮಾನ್ಯ ಆಹಾರ ಸಚಿವೆಯವರಿಗೆ ನಾವು ಹೇಳಿದ್ದೆವು, ಇಲ್ಲ. ನಾನು ಹೋಟೆಲಿಗೆ ಹೋಗಿ ಅಭ್ಯಾಸವಿಲ್ಲವೆಂದು ಅವರು ಹೇಳಿದರು. ಹೋಟೆಲು ತಿಂಡಿ ತಿನ್ನುವ ಅಭ್ಯಾಸವಿಲ್ಲದೇ ಇದ್ದವರಿಗೆ ಈ ಬೆಲೆ ಏರಿಕೆ ಬಗ್ಗೆ ವಿಚಾರ ಗೊತ್ತಿರುವುದಿಲ್ಲ. ಅವರು ಹೋಟೆಲ್ ತಿಂಡಿಯಲ್ಲಿ ಕಡಬು, ವಡೆ, ದೋಸೆ ತಿಂದಿದ್ದರೆ ಅದರ ಹಣೆಬರಹ ಗೊತ್ತಾಗುತ್ತಿತ್ತು.

೧.೦೦ ಪಿ.ಎಂ.

ಈ ಹೋಟೆಲ್ ಏನು ಎನ್ನುವುದೇ ಗೊತ್ತಿಲ್ಲ. ಇವರು ಮೊನ್ನೆ ಹೋಟೆಲ್ ಮಾಲೀಕರುಗಳನ್ನೆಲ್ಲಾ ಕರೆದಿದ್ದರು. ಇವರ ಫೋಟೋ ನೋಡಿದೆ, ಬಹಳ ಚೆನ್ನಾಗಿ ಬಂದಿದೆ, ಫೋಟೋದಲ್ಲಿ ತಾವೆಲ್ಲಾ ಒಟ್ಟೊಟ್ಟಿಗೆ ಕುಳಿತಿದ್ದೀರಿ. ಚೆನ್ನಾಗಿ ಇದೆ. ಆದರೆ ಬೆಲೆ ಮಾತ್ರ ಒಂದು ನಯಾಪೈಸೆ ಇಳಿಸಲಿಲ್ಲ. ಹೋಟೆಲ್ ಮಾಲೀಕರು ಇಳಿಸಲಿಲ್ಲ. ಒಂದು ಮಸಾಲೆ ದೋಸೆಗೆ ೩೮ ರೂಪಾಯಿ ಎಂದು ಹೇಳಿದರೆ ಎಲ್ಲಿದೆ ಮಸಾಲೆ ದೋಸೆ ಎಂದು ನನ್ನನ್ನು ಕೇಳಿದರು. ಬನ್ನಿ ನನ್ನ ಜೊತೆಯಲ್ಲಿ ಅಂತ ಹೇಳಿದರೆ ಅವರಿಗೆ ಬರುವುದಕ್ಕೆ ಟೈಂ ಇಲ್ಲ.

ಶ್ರೀ ಡಿ.ಬಿ. ಚಂದ್ರೆಗೌಡ:- ಮಂತ್ರಿಗಳ ಬೆಲೆ ಇಳಿದಿದೆಯೋ, ಇಲ್ಲವೋ?

ಶ್ರೀ ವಾಟಾಳ್ ನಾಗರಾಜ್:- ಮಂತ್ರಿಗಳ ಬೆಲೆ ಎಂತೋ ಇಳಿದು ಹೋಯಿತು ಬಿಡಿ. ಈ ಸಕ್ಕರೆ ಬೆಲೆಯನ್ನು ಜಾಸ್ತಿ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಯಾರು ಹೇಳಿದ್ದರು. ಲೋಕಸಭೆಯಲ್ಲಿ ಇನ್ನು ಅಯವ್ಯಯ ಮಂಡನೆ ಆಗಬೇಕಾಗಿದೆ. ರಾಜ್ಯದಲ್ಲೂ ಅಯವ್ಯಯ ಮಂಡನೆ ಆಗಬೇಕಾಗಿದೆ. ಇದು ಹಗಲು ದರೋಡೆಯಾಗಿದೆ. ಒಂದು ಕಡೆ ಕೇಂದ್ರ ಸರ್ಕಾರದಲ್ಲಿ ಆಯವ್ಯಯ ಮಂಡನೆ ಆದಮೇಲೆ ಅಲ್ಲಿಬೆಲೆ ಏರಿಸತಕ್ಕಂಥಾದ್ದು. ರಾಜ್ಯಸರ್ಕಾರದ ಆಯವ್ಯಯ ಮಂಡನೆ ಬಹಳ ದೂರದ ತಾರೀಖು ಇದೆ. ನಾವು ಏನು ಮಾಡಬೇಕು? ಇವರೇನು ತೆರಿಗೆರಹಿತವಾದಂತಹ ಆಯವ್ಯಯವನ್ನು ಈ ಸದನದಲ್ಲಿ ಮಂಡಿಸುತ್ತಾರ? ಇಲ್ಲ. ನನಗೆ ಗೊತ್ತಿದೆ ಅನೇಕ ಬಾಬುಗಳಿಗೆ ತೆರಿಗೆಯನ್ನು ಇವರೂ ಹಾಕುತ್ತಾರೆ ಮತ್ತು ಕೇಂದ್ರ ಸರ್ಕಾರದವರೂ ಹಾಕುತ್ತಾರೆ. ಇದಕ್ಕೆ ಮಧ್ಯೆಯಾಗಿ ರೈಲ್ವೆದರ ಏರತಕ್ಕಂಥ ಸೂಚನೆಗಳು ಇದೆ. ಇದಲ್ಲಾವನ್ನೂ ಮೀರಿಮಾಚಿ ಮೊದಲು ಅಲ್ಲಿ ಸಕ್ಕರೆ ಬೆಲೆ ಏರಿಸತಕ್ಕಂಥಾದ್ದು, ಇಲ್ಲಿ ಬಸ್ಸಿನ ದರ ಏರಿಸತಕ್ಕಂಥಾದ್ದು ಇದು ನಿಜವಾಗಲೂ ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರ, ನೀವು ದರೋಡೆಕೋರರನ್ನು ಮೀರಿಸತಕ್ಕಂತಹ ಅಡಳಿತವನ್ನು ತಾವು ಮಾಡುತ್ತಿದ್ದೀರಿ. ಇದು ನಾನು ಹೇಳುತ್ತೇನೆ ಸರಿಯಾದ ನೀತಿಯಲ್ಲ. ನಿಮಗೇನು ಮತ್ತೆ ಅಧಿಕಾರಕ್ಕೆ ಬರಬೇಕು ಎನ್ನತಕ್ಕಂಥ ಆಸೆ ಆಕಾಂಕ್ಷೆ ಇದೆಯೋ ಇಲ್ಲವೋ? ನೀವು ಈಗಲೇ ಇಡೀ ಸರ್ಕಾರವನ್ನು ಮುಚ್ಚಿ ಜನಗಳನ್ನು ತುಳಿದು, ಅವರ ತಲೆಯ ಮೇಲೆ ಹೊರೆಯನ್ನು ಹಾಕಿ ಹೋಗಬೇಕು ಎನ್ನತಕ್ಕಂಥ ನಿರ್ಧಾರವನ್ನು ತಾವು ಮಾಡಿದ್ದೀರ ಎಂದು ಕೇಳುತ್ತಿದ್ದೇನೆ. ಬೆಳಿಗ್ಗೆ ಪೇಪರ್

ನೋಡಿದರೆ ಬರಸಿಡಿಲು ಬಡಿದಹಾಗಾಯಿತು. ಈ ಪಡಿತರ ಚೀಟಿಯಿಂದ ಕೊಂಡುಕೊಳ್ಳತಕ್ಕಂತಹ ಬಡವರು, ನಿರ್ಗತಿಕರು ಕೊಂಡುಕೊಳ್ಳತಕ್ಕಂತಹ ಸಕ್ಕರೆಗೆ ಒಂದೂಮುಕ್ಕಾಲು ರೂಪಾಯಿ ಏಕ್‌ದಂ ನೀವು ಏರಿಸಿದ್ದೀರಿ. ಅದು ಯಾರ ಹೆಸರಿನಲ್ಲಿ, ರೈತನನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿ. ಇದು ಖಂಡಿತಾ ಇಲ್ಲ. ರೈತನನ್ನು ಕೆಳಗೆ ತುಳಿದಿದ್ದೀರಿ. ರೈತರ ಕತ್ತನ್ನು ಹಿಸುಕಿದ್ದೀರಿ. ಕೇಂದ್ರಸರ್ಕಾರದವರು ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿ ಮೂಗಿನ ಮೇಲೆ ತುಪ್ಪ ಹಚ್ಚಿದರು. ಸಾಲ ಮನ್ನಾ ಮಾಡಲಿಲ್ಲ. ಗೊಬ್ಬರದ ಮೇಲಿರುವ ಸಬ್ಸಿಡಿ ಎಲ್ಲಾ ಕಿತ್ತುಹಾಕಿದರು. ನಿಮ್ಮ ಗೊಬ್ಬರವನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿ ರೈತ ಈಗ ಇಲ್ಲ. ರೈತನನ್ನು ಚರಂಡಿಗೆ ತುಳಿದಿದ್ದಾರೆ. ಇವತ್ತು ಗಗನಕ್ಕೆ ಹೋಗಿರತಕ್ಕಂತಹ ಬೆಲೆ ಏರಿಕೆಯನ್ನು ತಡೆಹಿಡಿಯುವುದಕ್ಕೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದವರಿಗೆ ಸಾಧ್ಯ ಇದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಸಕ್ಕರೆ ಬೆಲೆ ಜಾಸ್ತಿ ಮಾಡಿರುವ ಕೇಂದ್ರ ಸರ್ಕಾರದ ನೀತಿಯನ್ನು ಖಂಡನೆ ಮಾಡಿ ನಾವು ಒಂದು ರೆಸಲ್ಯೂಷನ್ ಮಾಡಿ ಕಳುಹಿಸಿಕೋಡೋಣ. ದಯಮಾಡಿ ಸರ್ಕಾರ ಇದಕ್ಕೆ ಒಪ್ಪಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:- ಖಂಡನಾ ನಿರ್ಣಯ ಇವತ್ತು ಆಗಲೇ ಬೇಕು. ಇದರ ಜೊತೆಗೆ ಕೇಂದ್ರ ಸರ್ಕಾರದ ಸಕ್ಕರೆ ಬೆಲೆ ಏರಿಕೆಯನ್ನು ನಾವು ಆಕಸ್ಮಾತ್ ಒಪ್ಪುವುದಾದರೆ ರಾಜ್ಯಸರ್ಕಾರ ದವರು ಅದಕ್ಕೆ ಸಬ್ಸಿಡಿ ಕೊಡಬೇಕು. ಸಬ್ಸಿಡಿ ಕೊಡದೇ ಈ ಸಕ್ಕರೆಯನ್ನು ಮಾರುವುದಾದರೆ ಅದು ಮಹಾ ಮೋಸ. ತಾವು ಆಹಾರ ಮಂತ್ರಿಗಳು ಇವತ್ತು ಬಹಳ ಕೋಪದಲ್ಲಿ ಇರಬೇಕು ಎಂದು ಕಾಣುತ್ತದೆ. ನಿಮ್ಮ ಮುಖವನ್ನು ನೋಡಿದರೆ ಹಾಗೆ ಅನ್ನಿಸುತ್ತದೆ, ಈಗ ಕೋಪ ಹೋಯಿತು ಅಂತ ಕಾಣುತ್ತದೆ, ನೀವು ಯಾವಾಗಲೂ ಸ್ವಲ್ಪ ನಗುತ್ತಾ ಇರಬೇಕು. ನೀವು ನಗುತ್ತಾ ಇದ್ದರೆ ನಿಮಗೆ ಕೋಪ ಇಲ್ಲ ಅಂತ ನಾವು ತಿಳಿದುಕೊಳ್ಳುತ್ತೇವೆ. ಮೊನ್ನೆ ಹೋಟೆಲ್ ತಿಂಡಿ ಬೆಲೆ ಇಳಿಯಿತು ಎಂದು ಹೇಳಿ ನಾನು ಪೇಪರ್‌ನಲ್ಲಿ ಓದಿದೆ. ನಾನು ಅನೇಕ ಹೋಟೆಲ್‌ಗಳಿಗೆ ಹೋಗಿದ್ದೆ, ಯಾವ ತಿಂಡಿ ಬೆಲೆಯೂ ಇಳಿದಿಲ್ಲ. ಒಂದು ಕಾಫಿಗೆ ಎಂಟು ರೂಪಾಯಿ ಇದೆ.

ಶ್ರೀ ಡಿ.ಬಿ. ಚಂದ್ರೆಗೌಡ:- ಮಂತ್ರಿಗಳ ಬೆಲೆ ಇಳಿದಿದೆಯೋ ಇಲ್ಲವೋ?

ಶ್ರೀ ವಾಟಾಳ್ ನಾಗರಾಜ್:- ಒಂದು ದೋಸೆಗೆ ೩೮ ರೂಪಾಯಿ, ಒಂದು ಕಡುಬಿಗೆ ಎಂಟು ರೂಪಾಯಿ, ಒಂದು ವಡೆಗೆ ಎಂಟು ರೂಪಾಯಿ, ಏನು ಇದು? ನಾವು ರಾಜ್ಯದಲ್ಲಿ ಎಲ್ಲಿ ಬದುಕಬೇಕು? ಹೋಟೆಲ್ ತಿಂಡಿಯ ಬೆಲೆಯಿಂದ ಜೀವನ ಮಾಡುತ್ತಿರತಕ್ಕಂಥ ಕೋಟ್ಯಾಂತರ ಜನಕ್ಕೆ ನೀವು ಏನು ಕೊಡುತ್ತೀರಿ? ನೀವು ಸುಮ್ಮನೆ ಆಹಾರ ಮಂತ್ರಿಗಳಾಗಿ ಬೆಲೆ ಏರಿಕೆ ಆಹಾರ ಪದಾರ್ಥಗಳನ್ನು ಹಂಚುವುದಕ್ಕೆ ಮಂತ್ರಿಗಳಾಗಿರತಕ್ಕಂಥದ್ದು ಸರಿಯಲ್ಲ. ಎನ್ನತಕ್ಕಂತಹ ಮಾತನ್ನು 'ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯ ಸರ್ಕಾರ ಈ ಕೂಡಲೇ ಏರಿಸಿರತಕ್ಕಂತಹ ಸಕ್ಕರೆ ಬೆಲೆಯನ್ನು ಕಟ್ಟಿಕೊಡಬೇಕು. ಮತ್ತು ಪಡಿತರ ಆಹಾರ ಪದಾರ್ಥಗಳ ಬೆಲೆಯನ್ನು ತಾವು ಏರಿಸಿದ್ದೀರಿ, ಅದನ್ನೂ ಸಹ ಕಟ್ಟಿಕೊಡಬೇಕು ಎನ್ನತಕ್ಕಂಥಾದ್ದನ್ನು ಒತ್ತಾಯ ಮಾಡಿಹೇಳುತ್ತೇವೆ. ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಈ ಸದನದಲ್ಲಿ ಸರ್ವಾನುಮತವಾದಂತಹ ಒಂದು ಖಂಡನಾ ನಿರ್ಣಯವನ್ನು ಮಾಡಬೇಕು ಎಂದು ತಮ್ಮಲ್ಲಿ ಆಗ್ರಹಪೂರ್ವಕವಾಗಿ ಒತ್ತಾಯಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ಈ ಸಕ್ಕರೆ ಬೆಲೆ ಜಾಸ್ತಿ ಮಾಡಿರುವುದರ ಬಗ್ಗೆ ಖಂಡನೆ ಮಾಡಿ ಬೆಲೆಯನ್ನು ಇಳಿಸಬೇಕು, ಇದನ್ನು ನಾವು ಒಪ್ಪಿಲ್ಲ ಎಂದು ಹೇಳಿ ಒಂದು ರೆಸಲ್ಯೂಷನ್ ಮೂವ್‌ಮಾಡುತ್ತೇವೆ. ಇಲ್ಲ ಅಂದರೆ ನೀವು ರಾಜ್ಯಸರ್ಕಾರ ದವರು ಇಲ್ಲಿ

ನಮ್ಮ ರಾಜ್ಯದಲ್ಲಿ ಸಕ್ಕರೆ ಬೆಲೆ ಜಾಸ್ತಿ ಮಾಡಿಲ್ಲ, ಅದನ್ನು ನಾವು ಭರಿಸಿಕೊಡುತ್ತೇವೆ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಈಗ ಮಾನ್ಯ ಮಂತ್ರಿಗಳು ದಯವಿಟ್ಟು ಮೌನವನ್ನು ಮುರಿದು ಬಾಯಿ ಬಿಡಲಿ. ನಿಮ್ಮ ಸರ್ಕಾರದ ನಿರ್ಧಾರ ಏನು? ಆಹಾರ ಸಚಿವರ ನಿರ್ಧಾರ ಏನು ಎಂದು ಹೇಳಲಿ.

ಶ್ರೀ ಆರ್.ವಿ. ದೇಶಪಾಂಡೆ:- ಈಗ ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿ ಹಾಕಿ ಸುಮ್ಮನೆ ಕೂಡುವುದಕ್ಕೆ ಆಗುವುದಿಲ್ಲ. ಏಕೆಂದರೆ ನೀವು ಸಹ ನಾಡಿನ ಜನತೆಯ ಬಗ್ಗೆ ಚಿಂತೆ ಮಾಡಬೇಕಾಗುತ್ತದೆ. ರೈತರ ಬಗ್ಗೆ, ಬಡವರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಾವು ಹೇಳಿದಿರಿ ರೈತರಿಗೆ ಅನುಕೂಲ ಆಗುವುದಿಲ್ಲ.

(ಗೊಂದಲ)

ಶ್ರೀವಾಟಾಳ್ ನಾಗರಾಜ್:- ಸರ್ಕಾರದ ನಿರ್ಧಾರ ಏನು ಎಂಬುದನ್ನು ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ನೀವು ನಾಡಿನ ಜನತೆಯ ಬಗ್ಗೆ ಚಿಂತನೆ ಮಾಡಬೇಕಾಗಿದೆ. ರೈತರ ಬಗ್ಗೆ ಹಾಗೂ ಬಡವರ ಬಗ್ಗೆಚಿಂತನೆ ಮಾಡಬೇಕಾಗಿದೆ. ರೈತರಿಗೆ ಇದರಿಂದ ಅನುಕೂಲವಾಗುವುದಿಲ್ಲ. ಕೇಂದ್ರ ಸರ್ಕಾರದ ಲಿಬರಲೈಸೇಶನ್ ಪಾಲಿಸಿ ಏನೆಂದರೆ ಐಎಂಎಫ್ ಮತ್ತು ವರ್ಲ್ಡ್ ಬ್ಯಾಂಕ್ ಒತ್ತಡಕ್ಕೆ ಮಣಿದು ಕ್ರಮೇಣ ಎಲ್ಲಾ ಸಬ್ಸಿಡಿಗಳನ್ನು ವಿತ್‌ಡ್ರಾ ಮಾಡಿದ್ದೀರಿ. ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು ವಿತ್‌ಡ್ರಾ, ಮಾಡಿದ್ದೀರಿ. ಸೀಮೆ ಎಣ್ಣೆಯನ್ನು ಕೇಂದ್ರಸರ್ಕಾರದವರು ಇಂಪೋರ್ಟ್ ಮಾಡಿಕೊಳ್ಳಲು ಆರ್ಡರ್ ಮಾಡಿದ್ದಾರೆ, ತಾವು ಈ ವಿಷಯವನ್ನು ಹಗುರವಾಗಿ ತೆಗೆದುಕೊಳ್ಳಬಾರದು. ರಾಜ್ಯದ ಜನತೆ ಬಗ್ಗೆ ತಾವು ವಿಚಾರ ಮಾಡಬೇಕು. ನಮ್ಮ ಸರ್ಕಾರ ಇದ್ದಾಗ ೨ರೂಪಾಯಿಗೆ ಅಕ್ಕಿಯನ್ನು ಕೊಟ್ಟಿದ್ದೇವೆ. ೩೮ಕೋಟಿ ರೂಪಾಯಿ ಸಬ್ಸಿಡಿ ಕೊಟ್ಟಿದ್ದೇವೆ. ತಾವು ಏತಕ್ಕೆ ಆ ಪ್ರಕಾರ ಮಾಡಬಾರದು? ನಿಮ್ಮ ಸರ್ಕಾರದ ನಿಲುವು ಏನು? ಕೇಂದ್ರ ಸರ್ಕಾರದವರು ಏನು ಮಾಡುತ್ತಾರೆ ಅದನ್ನು ನೀವು ಇಲ್ಲಿ ಒಪ್ಪಿಕೊಳ್ಳುತ್ತಾಹೋದರೆ ಈ ನಾಡಿನ ಜನರಗತಿ ಏನು? ನೀವು ನಿಮ್ಮ ನೀತಿಯನ್ನು ಕೇಂದ್ರಸರ್ಕಾರಕ್ಕೆ ಹೇಳಬೇಕು. ಇದು ಮಾಡಿದ್ದು ತಪ್ಪು ಎಂದು ನೀವು ಅವರಿಗೆ ಹೇಳಬೇಕು. ಇದೇ ರೀತಿ ಕೇಂದ್ರ ಸರ್ಕಾರ ಮಾಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ಈಗಾಗಲೇ ಸಾಕಷ್ಟು ಭಾರ ರೈತರ ಮೇಲೆ ಹಾಗೂ ಬಡವರ ಮೇಲೆ ಬಿದ್ದಿದೆ. ಅವರು ಜೀವನ ಮಾಡುವುದೇ ಕಷ್ಟವಾಗಿದೆ. ಈ ವಿಚಾರದಲ್ಲಿ ತಮ್ಮ ಸ್ಪಷ್ಟವಾದ ನಿಲುವು ಏನು ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಬಿ.ಎಸ್. ಬನ್ನಿಕೋಡ್:- ಅಧ್ಯಕ್ಷರೆ, ಮಾನ್ಯ ಸಚಿವರು ರೈತರಿಗೆ ಹೆಚ್ಚಿನ ಬೆಲೆ ಕೊಡಲಿಕ್ಕೆ ಕೇಂದ್ರ ಸರ್ಕಾರ ಸಕ್ಕರೆ ಬೆಲೆಯನ್ನು ಹೆಚ್ಚು ಮಾಡಿದೆ ಎಂದು ಹೇಳಿದರು ಒಂದು ಕೆ.ಜಿ. ಸಕ್ಕರೆಗೆ ೧.೮೦ಪೈಸೆ ಜಾಸ್ತಿ ಮಾಡಿ ಒಂದು ಟನ್‌ಗೆ ೫ ರೂ. ಕೊಡುವಂತಹ ವ್ಯವಸ್ಥೆಯನ್ನು ಯಾರು ಒಪ್ಪುತ್ತಾರೆ ? ಸಕ್ಕರೆ ಲಾಬಿಯ ಹಿಡಿತಕ್ಕೆ ಸಿಕ್ಕಿ ರೈತರ ಹೆಸರಿನಲ್ಲಿ ವಂಚನೆ ಮಾಡುತ್ತಿದ್ದೀರಿ. ಇವೊತ್ತು ರೈತರು ಬೆಳೆದಂತಹ ಗೋವಿನ ಜೋಳ ೪೫೦ರೂ.ಇದ್ದದ್ದು ೧೫೦ ರೂಪಾಯಿಯಾಗಿದೆ. ತಮಗೆ ರೈತರ ಪರಿಸ್ಥಿತಿಯ ಬಗ್ಗೆ ಗೊತ್ತಿದೆ. ತಾವು ರೈತಾಪಿ ಕುಟುಂಬದಿಂದ ಬಂದಿದ್ದೀರಿ. ೪೫೦ ರೂಪಾಯಿ ಇದ್ದಂಥ ಕ್ವಿಂಟಲ್ ಜೋಳ ೧೪೦ಕ್ಕೆ ಇಳಿದರೆ ರೈತನ ಗತಿ ಏನಾಗಬೇಕು? ಹಾಗೆಯೇ ರೈತರ ಬೆಳೆಯತಕ್ಕಂಥ ಹತ್ತಿ ೨೬೦೦ ಇದ್ದದ್ದು ೯೦೦ರೂಪಾಯಿ ಕ್ವಿಂಟಲ್‌ಗೆ ಮಾರಾಟವಾಗುತ್ತಿದೆ. ಸೂರ್ಯಕಾಂತಿ ೧೪೦೦ ಕ್ವಿಂಟಾಲ್ ಇದ್ದದ್ದು ೭೦೦ ರೂಪಾಯಿ ಕ್ವಿಂಟಲ್‌ಗೆ ಮಾರಾಟವಾಗುತ್ತಿದೆ. ಈ ರೀತಿ ಒಂದು ಕಡೆ ರೈತ

ಬೆಳೆದಂತಹ ಕೃಷಿ ಉತ್ಪನ್ನಗಳ ದರ ಪಾತಾಳಕ್ಕೆ ಹೋಗುತ್ತಿದೆ. ಈ ದಿವಸ ರೈತನು ಬೆಳೆಯ ಮೇಲೆ ಮಾಡಿದಂತಹ ಖರ್ಚು ಕೂಡ ಸಿಕ್ಕುತ್ತಿಲ್ಲ. ರೈತ ಸಾಲಗಾರನಾಗುತ್ತಿದ್ದಾನೆ. ರೈತ ಸಾಲಗಾರನಾಗಲು ನೀವು ಜವಾಬ್ದಾರರು. ನೀವು ರೈತನ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲು ತಯಾರಿಲ್ಲ. ರೈತ ತನ್ನ ಬೆಳೆಗೆ ಬೇಕಾದ ರಸಗೊಬ್ಬರಗಳನ್ನು ಔಷಧಿಗಳನ್ನು, ಕ್ರಿಮಿನಾಶಕಗಳನ್ನು ಕೊಳ್ಳುವ ಸ್ಥಿತಿಯಲ್ಲಿಲ್ಲ. ೫೦ ಕೆ.ಜಿ. ರಸಗೊಬ್ಬರ ೨೫೦ ಕ್ಕೆ ಸಿಗುತ್ತಿದ್ದು, ಇವತ್ತು ೭೦೦ ರೂ. ಆಗಿದೆ. ಈ ದೇಶದ ರೈತ ಭಾರತದ ಬೆನ್ನೆಲುಬು ಎಂದು ಹೇಳುತ್ತೀರಿ. ಆದರೆ ಅವನ ಬಗ್ಗೆ ನೀವು ಏನು ಮಾಡಿದ್ದೀರಿ? ರೈತ ಜೀವನಾವಶ್ಯಕ ವಸ್ತುಗಳನ್ನು ಕೊಂಡುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಅವನಿಗೆ ಯಾವುದೆ ಸೌಲಭ್ಯಗಳು ಸಿಗುತ್ತಿಲ್ಲ. ಕುಡಿಯುವ ನೀರು, ಶಿಕ್ಷಕರು, ರಸ್ತೆ, ಬಸ್ ಮತ್ತಿತರಯಾವುದೇ ಸೌಲಭ್ಯಗಳನ್ನು ಅವನಿಗೆ ಒದಗಿಸುತ್ತಿಲ್ಲ. ಇಂತಹ ಪರಿಸ್ಥಿತಿ ಇರುವಾಗ ನೀವು ರೈತರ ಹೆಸರಿನಲ್ಲಿ ಬೆಲೆ ಏರಿಸಿ ವಂಚನೆ ಮಾಡುತ್ತಿರುವುದನ್ನು ನಿಲ್ಲಿಸಬೇಕು. ದಯವಿಟ್ಟು ಸರ್ಕಾರ ಮಧ್ಯ ಪ್ರವೇಶ ಮಾಡಿ ಮಾರ್ಕೆಟ್‌ನಲ್ಲಿ ಅವನ ವಸ್ತುಗಳನ್ನು ಖರೀದಿಸಿ, ಅವನಿಗೆ ಹೆಚ್ಚಿನ ಬೆಲೆಯನ್ನು ಕೊಡಲು ಕ್ರಮ ಕೈಗೊಳ್ಳಬೇಕು. ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಸರ್ಕಾರ ರೈತರು ಬೆಳೆದ ಬೆಳೆಗಳಿಗೆ ಹೆಚ್ಚು ರೊಕ್ಕ ಕೊಡಲು ತಯಾರಿಲ್ಲ. ಸಿ.ಸಿ.ಐ.ಇದೆ. ಕರ್ನಾಟಕ ಫೆಡರೇಶನ್ ಕಾರ್ಪೋರೇಷನ್ ಇದೆ ಅವರು ಹತ್ತಿಕೊಳ್ಳಲಿಕ್ಕೆ ತಯಾರಿಲ್ಲ. ೨೦೦೦ ರೂಪಾಯಿ ಇದ್ದಂತ ಹತ್ತಿ ಇವತ್ತು ೫,೦೦೦ ಆಗಿದೆ ಬರಗಾಲ ಬಿದ್ದಾಗ ರೈತನು ೧೦೦ರೂ-೨೦೦ ಈ ರೀತಿಯಾಗಿ ಕಡಿಮೆ ಬೆಲೆಗೆಲ್ಲಾ ಮಾರಾಟ ಮಾಡಿದ್ದಾನೆ. ಗೋಕಾಕದಲ್ಲಿ ಗುಂಜಾಳ ೪೦೦ರೂ ಕ್ವಿಂಟಲ್‌ಗೆ ಇದ್ದದ್ದು ೨೦೦ ರೂಪಾಯಿಯಾಗಿದೆ. ಇಷ್ಟು ಬೆಲೆ ಇಳಿದರೂ ಕೂಡ ಸರ್ಕಾರದವರು ಕೊಳ್ಳುವುದಕ್ಕೆ ತಯಾರಿಲ್ಲ. ನಮ್ಮ ಸರ್ಕಾರ ಇದ್ದಾಗ ಕೇಂದ್ರ ಸರ್ಕಾರದವರು, ಪ್ಲಾನಿಂಗ್ ಕಮಿಷನ್‌ನವರು ಬೆಲೆ ಏರಿಸಬೇಕೆಂದು ಹೇಳಿದರೂ ಕೂಡ ನಾವು ಅಕ್ಕಿ ರೇಟ್ ಏರಿಸಲಿಲ್ಲ. ೨ರೂ.ಗೆ ಒಂದು ಕೆ.ಜಿ. ಅಕ್ಕಿ ಕೊಟ್ಟಿದ್ದೇವೆ. ಶ್ರೀ ರಾಮಕೃಷ್ಣ ಹೆಗಡೆಯವರು ಆ ಪ್ರಕಾರ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದರು. ಕೇಂದ್ರ ಸರ್ಕಾರ ಕೊಡಬಾರದು ಎಂದು ಹೇಳಿದರೂ ನಾವು ಕೊಟ್ಟಿದ್ದೇವೆ. ನೀವು ಸಹ ಆ ಪ್ರಕಾರ ಮಾಡಬೇಕು. ಆಂಧ್ರದಲ್ಲಿ ಯಾವರೀತಿ ಕೊಟ್ಟಿದ್ದಾರೆ ಅದೇರೀತಿ ಇಲ್ಲಿ ಕೊಡಬೇಕು. ಬಡವರು ಜೀವನ ಮಾಡಬೇಕಾದರೆ ಬಹಳ ಕಷ್ಟ ಇದೆ, ಇದನ್ನು ತಾವು ಯೋಚನೆ ಮಾಡಬೇಕು. ರೈತನ ಶೋಷಣೆಯನ್ನು ನಿಲ್ಲಿಸಬೇಕು. ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದವರು ತಿಳಿಸಿ, ಸಬ್ಸಿಡಿಯನ್ನು ರಾಜ್ಯಸರ್ಕಾರವೇ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಹತ್ತಿ, ಜೋಳ, ಭತ್ತಕ್ಕೆ ಸಪೋರ್ಟ್ ಪ್ರೈಸ್ ಕೊಟ್ಟು ಯಾವ ರೀತಿ ಧಾನ್ಯಗಳನ್ನು ಸರ್ಕಾರವೇ ಖರೀದಿ ಮಾಡಿ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತದೆಯೋ ಅದೇರೀತಿ ಈಗ ಸಕ್ಕರೆ ರೂ.೬.೯೦ ರಿಂದ ೮.೫೦ ರೂಪಾಯಿಗಳಾಗಿದೆ. ಅಂದರೆ ರೂ ೧.೪೦ ಜಾಸ್ತಿಯಾಗಿದೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ, ಕಬ್ಬಿಗೂ ಕೂಡ ಸಪೋರ್ಟ್ ಪ್ರೈಸ್ ಕೊಟ್ಟು ಕೊಳ್ಳುವ ವ್ಯವಸ್ಥೆ ಮಾಡ ಬೇಕೆಂದು ಹೇಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ಉಪನಾಯಕರಾದ ಶ್ರೀ ಸಿಂಧ್ಯಾರವರು ಬಹಳ ಮುಖ್ಯವಾದಂಥ ವಿಷಯವನ್ನು ಎತ್ತಿದ್ದಾರೆ. ಈ ದೇಶದ ಪ್ರತಿಯೊಬ್ಬ ಪ್ರಜೆಯ ದಿನನಿತ್ಯ ವ್ಯವಹಾರಕ್ಕೆ ಸಂಬಂಧಪಟ್ಟಂಥ ಮತ್ತು ಮಹತ್ವವಾದಂಥಹ ವಿಷಯ, ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಮತ್ತೆ ಇತರ ಕೆಲವು ಸದಸ್ಯರು ಇದರ ಬಗ್ಗೆ ಬಹಳ ಸೂಕ್ತವಾದಂತಹ ರೀತಿಯಲ್ಲಿ ಮಾತನಾಡಿದ್ದಾರೆ. ರಾಜ್ಯಕ್ಕೆ ಸಂಬಂಧಪಟ್ಟಂತಹ ಬೆಲೆ ಏರಿಕೆ ಮತ್ತು ರೈತರು ಬೆಳೆದ ಸಾಮಾನುಗಳಿಗೆ ಯೋಗ್ಯ ಬೆಲೆಯನ್ನು ಕೊಡಬೇಕಾಗಿದ್ದುದ್ದು ನಮ್ಮ ಮಟ್ಟದಲ್ಲಿ, ಶಾಸನಸಭೆಯಲ್ಲಿ ಚರ್ಚೆ ಮಾಡಬಹುದು. ಅದನ್ನು ಪರಿಶೀಲನೆ

ಮಾಡಬಹುದು ಮತ್ತು ಸೂಕ್ತವಾದಂಥ ಉತ್ತರವನ್ನು ಸರ್ಕಾರ ಕೊಡುತ್ತದೆ. ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅನೇಕ ಅವಕಾಶಗಳು ಇವೆ. ಅದರ ಬಗ್ಗೆ ನಾವೆಲ್ಲ ಕುಳಿತು ಚರ್ಚೆ ಮಾಡೋಣ. ಆದರೆ ಇದು ಕೇಂದ್ರ ಸರ್ಕಾರದಲ್ಲಿ ಮಾಡದಂಥ ತೀರ್ಮಾನ ಇದೆ. ಅದರ ಬಗ್ಗೆ ಚರ್ಚೆ ಮಾಡಲು ನಮ್ಮ ಎಲ್ಲಾ ಪ್ರತಿನಿಧಿಗಳು ಸಮರ್ಥರಿದ್ದಾರೆ. ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಅಂಥ ಸಮರ್ಥ ಪ್ರತಿನಿಧಿಗಳು ಇದ್ದಾರೆ. ಅವರು ಚರ್ಚೆ ಮಾಡುತ್ತಾರೆ. ಅವರಿಗೆ ದೇಶದ ಜನಗಳ ಕಷ್ಟ ಸುಖಗಳ ಬಗ್ಗೆ ಅರಿವು ಇದೆ. ಆದುದರಿಂದ ಈಗ ಇಲ್ಲಿ ಒಂದು ನಿರ್ಣಯ ಮಾಡುತ್ತೇವೆ. ಖಂಡನೆ ಮಾಡುತ್ತೇವೆ ಎನ್ನುವುದು ಸೂಕ್ತವಲ್ಲ.....

ಶ್ರೀ ವಾಟಾಳ್ ನಾಗರಾಜ್:- ರಾಜ್ಯಸರ್ಕಾರಕ್ಕೆ ಸಹಾಯಧನ ಕೊಡಿ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಈ ನಿರ್ಣಯವನ್ನು ಮಾಡುವುದಕ್ಕೆ ಬರುವುದಿಲ್ಲ. ಬೆಲೆ ಏರಿಕೆಯಿಂದ ಜನಗಳಿಗೆ ಬಹಳ ತೊಂದರೆಯಾಗಿದೆ ನಿಜ, ಇದನ್ನು ನಮ್ಮ ನಿಮ್ಮ ಪ್ರತಿನಿಧಿಗಳು ಕೇಂದ್ರದಲ್ಲಿ ಚರ್ಚೆ ಮಾಡಲಿ, ಈ ಶಾಸನಸಭೆಯಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಸಬ್ಸಿಡಿ ಕೊಡಿ,

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ಮಾಡಿದಂಥ ತೀರ್ಮಾನದ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಇದು ಸರಿಯಾದಂತಹ ಪೂರಂ ಅಲ್ಲ. ಎರಡನೆಯದು ಇಂಥ ವಿಷಯಗಳನ್ನು ತೀರ್ಮಾನ ಮಾಡಬೇಕಾದರೆ ಎರಡು ಅಂಶಗಳು ಇರುತ್ತವೆ. ಇದು ಒಂದು ವಿಷಚಕ್ರ ಇದ್ದಹಾಗೆ.

ಶ್ರೀ ವಾಟಾಳ್ ನಾಗರಾಜ್:- ಸಂಸದೀಯ ಸಚಿವರೇ, ನಿಮ್ಮ ಮೊಂಡುತನ ಬೇಡ. ನಮ್ಮ ಪ್ರತಿನಿಧಿಗಳು ಇದ್ದಾರೆ ಅದು ನಮಗೆ ಗೊತ್ತಿದೆ. ನಮ್ಮ ರಾಜ್ಯದ ಹಣೆಬರಹ ಏನೇನು ಆಗಿದೆ, ನಮ್ಮ ಪ್ರತಿನಿಧಿಗಳು ಏನೇನು ಆಗಿದ್ದಾರೆ ಎಂಬುದು ನಮಗೆ ಗೊತ್ತಿದೆ. ಈಗ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸರಿಯಾದ ವಾತಾವರಣ ಅಲ್ಲ. ನಮ್ಮ ಪ್ರತಿನಿಧಿಗಳು ರಾಜ್ಯದ ಅಭಿವೃದ್ಧಿಯ ಬಗ್ಗೆ ಏನೇನು ಮಾಡಿದ್ದಾರೆ, ರೈಲ್ವೆ ಬಗ್ಗೆ ಏನು ಮಾಡಿದ್ದಾರೆ, ವಿಜಯನಗರದ ಉಕ್ಕು ಕಾರ್ಖಾನೆಯ ಬಗ್ಗೆ ಏನು ಮಾಡಿದ್ದಾರೆ ? ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದರೆ ಬಹಳ ಆಗುತ್ತದೆ. ಅದು ಈಗ ಬೇಡ. ಈಗ ರಾಜ್ಯಸರ್ಕಾರ ಸಕ್ಕರೆ ಬೆಲೆ, ಏರಿಕೆ ಬಗ್ಗೆ ಏನು ಮಾಡಿದೆಹೇಳಿ

ಶ್ರೀಮತಿ ಮನೋರಮ ಮಧ್ವರಾಜ್:- ಈಗಾಗಲೇ ನಮ್ಮ ಸಂಸದೀಯ ವ್ಯವಹಾರ ಸಚಿವರು ಹೇಳಿದ ಹಾಗೆ ಕೇಂದ್ರ ಸರ್ಕಾರದ ನಿರ್ಣಯವನ್ನು ನಾವು ಖಂಡನೆ ಮಾಡುವುದಕ್ಕೆ ಸಾಧ್ಯವೇ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇದರಲ್ಲಿ ರಾಜ್ಯ ಸರ್ಕಾರದ ಜವಬ್ದಾರಿ ಇಲ್ಲವೇ? ರಾಜ್ಯಕ್ಕೂ ಕೇಂದ್ರಕ್ಕೂ ಸಂಬಂಧ ಇಲ್ಲವೇ? ಏನು ಈ ರೀತಿ ಬೇಜವಬ್ದಾರಿಯಿಂದ ಮಾತನಾಡುತ್ತಿದ್ದೀರಿ. ನಮಗೆ ಸಂಬಂಧ ಇಲ್ಲ ಎನ್ನುವ ರೀತಿಯಲ್ಲಿ, ಇದು ಸರಿಯಲ್ಲ. ರಾಜ್ಯಸರ್ಕಾರ ನೀವು ಏನುಕೊಡುತ್ತೀರಿ ? ಈ ಏರಿದಂಥ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ರಾಜ್ಯಸರ್ಕಾರದ ಸಹಕಾರ ಏನು, ಸಹಾಯ ಏನು, ಅದನ್ನು ಹೇಳಿ. ಅದನ್ನು ಬಿಟ್ಟು ಕೇಂದ್ರಕ್ಕೂ ನಮಗೂ ಸಂಬಂಧ ಇಲ್ಲ ಎಂದರೆ ಹೇಗೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ಸನ್ಮಾನ್ಯ ಸಭಾಪತಿಗಳೇ ಮಾನ್ಯ ಸದಸ್ಯರು ರೈತನ ಬೆಳೆಗೆ ಅನುಗುಣವಾಗಿ ರಾಜ್ಯ ಸರ್ಕಾರ ಸಬ್ಸಿಡಿ ಕೊಡುತ್ತದೆಯೇ ಎನ್ನುವ ವಿಷಯತಂದು ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ದೇಶದಲ್ಲಿ ಕೇಂದ್ರ ಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ ಏನು ನಡೆಯುತ್ತಾ ಇದೆ ಅದನ್ನು ಗಮನಿಸಿ ಪ್ರಯಾರಿಟೀಸ್ ಹಾಕಿಕೊಂಡು ನಾವು ಹೋಗಬೇಕಾಗುತ್ತದೆ. ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಸಬ್ಸಿಡಿ ಕೊಡುವ ಪದ್ಧತಿಯನ್ನು ಕಡಿಮೆಮಾಡಿ ಸರ್ಕಾರದಲ್ಲಿರಬಹುದಾದ ಧನವನ್ನು ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಉಪಯೋಗಿಸಬೇಕು. ಎನ್ನುವುದು ನಮ್ಮ ಸರ್ಕಾರದ ಪದ್ಧತಿ ಪ್ರತಿಯೊಂದಕ್ಕೂ ಸಬ್ಸಿಡಿ ಕೊಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಸಬ್ಸಿಡಿಯನ್ನು ನಾವು ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಇದಕ್ಕಾಗಿ ನಮ್ಮಲ್ಲಿ ಒಬ್ಬರು, ಸಕ್ಕರೆ ಮಂತ್ರಿಗಳು ಇದ್ದಾರೆ, ಸಕ್ಕರೆ ಮಂತ್ರಿಗಳು ಇದರ ಬಗ್ಗೆ ಒಪ್ಪುತ್ತಾರೆಯೇ, ಇಲ್ಲವೊ ಅವರನ್ನು ಕೇಳಬೇಕು. ಸಚಿವರು ಯಾರು ಎಂದು ನಮಗೆ ಪರಿಚಯವಿಲ್ಲ, ಆಹಾರ ಮಂತ್ರಿಗಳು ಸ್ವಲ್ಪ ಪರಿಚಯ ಇದ್ದಾರೆ, ಸಂಸದೀಯ ಸಚಿವರು ಚೌಡರೆಡ್ಡಿಯವರು ಪರಿಚಯ ಇದ್ದಾರೆ ನಮಗೆ ಸಕ್ಕರೆ ಸಚಿವರ್ಯಾರು ಎನ್ನುವುದು ಪರಿಚಯ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲಿ ಮೂಲಭೂತವಾದ ವಿಷಯವನ್ನು ಬಿಡುತ್ತಿದ್ದೇವೆ. ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೇಂದ್ರಸರ್ಕಾರ ಲೆವಿರೂಪದಲ್ಲಿ ಸಕ್ಕರೆಯನ್ನು ಕೊಟ್ಟರೆ ಅಂತಿಮವಾಗಿ ರೈತ ಕಡಿಮೆ ಬೆಲೆಗೆ ಕಬ್ಬನ್ನು ಕೊಡುತ್ತಾನೆ. ಕಬ್ಬಿನ ಬೆಲೆ ಜಾಸ್ತಿ ಮಾಡದೆ ಸಕ್ಕರೆ ಕಾರ್ಖಾನೆಯವರಿಂದ ಲೆವಿ ರೂಪದಲ್ಲಿ ಸಕ್ಕರೆ ತೆಗೆದುಕೊಂಡು ಕೆಜಿಗೆ ೧.೮೦ ಪೈಸೆಯನ್ನು ಕೇಂದ್ರ ಸರ್ಕಾರ ಜಾಸ್ತಿ ಮಾಡಿದುದ್ದು ಸರಿಯೇ? ಕಬ್ಬಿನ ಬೆಲೆಯನ್ನು ಜಾಸ್ತಿ ಮಾಡದೆ ಸಕ್ಕರೆ ಬೆಲೆಯನ್ನು ಏರಿಸಿಕೊಂಡು ಹೋಗುವುದನ್ನು ರೈತರು ಸಹಿಸಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಮನೆಯಿಂದ ಒಂದು ನಿರ್ಣಯವನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ವಿಚಾರವನ್ನು ನಾವು ಪ್ರಸ್ತಾಪ ಮಾಡುವುದು ಏಕೆಂದರೆ, ತಮ್ಮಿಂದ ನಾವು ೨ ಉತ್ತರಗಳನ್ನು ನಿರೀಕ್ಷೆ ಮಾಡಿದ್ದೆವು. ಸದಸ್ಯರ ಭಾವನೆಗಳು ಏನು ಎನ್ನುವುದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆಂದು ಉತ್ತರ ಕೊಡಬಹುದಾಗಿತ್ತು. ಕೇಂದ್ರ ಸರ್ಕಾರ ಲೆವಿ ಸಕ್ಕರೆಯನ್ನು ಏನು ಕಳುಹಿಸಿಕೊಡುತ್ತದೆ ಅದನ್ನು ವಿತರಣೆ ಮಾಡತಕ್ಕಂತವರು ನೀವೇ. ಹೌದು, ಜಾಸ್ತಿಯಾಗಿದೆ ಜನಗಳ ಭಾವನೆ ಅರ್ಥವಾಗಿದೆ ಸಬ್ಸಿಡಿ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಭರವಸೆ ಕೊಡುವುದಕ್ಕೆ ನಿಮಗೆ ಏನು ತೊಂದರೆ ಇದೆ. At least you consider that.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ವಿಚಾರದಲ್ಲಿ ಯಡಿಯೂರಪ್ಪ ಮಾತನಾಡಿದುದ್ದು ಸೂಕ್ತವಲ್ಲವೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ತಾವು ಹೇಳಿದ್ದು ಅರ್ಧ ಒಪ್ಪುತ್ತೇನೆ. ಅರ್ಧ ಒಪ್ಪುವುದಿಲ್ಲ. ನಾನು ಮೊದಲೆ ಹೇಳಿದೆ. ಇದು ಗಂಭೀರವಾದ ಸಮಸ್ಯೆ ಇದೆ. ನಿತ್ಯ ಜೀವನಕ್ಕೆ ಬೇಕಾದ ಸಕ್ಕರೆ ವಿಚಾರದಲ್ಲಿ ಸದನದ ಸದಸ್ಯರ ಭಾವನೆಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇನೆ. ಸಬ್ಸಿಡಿ ಕೊಡುವುದಕ್ಕೆ ಸಾಧ್ಯವಿಲ್ಲ. ಕೊಟ್ಟರೆ ೩ ತಿಂಗಳಿಗೆ ಎರಡೂವರೆ ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ಇದನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಮೂರನೆಯದು ಮಾನ್ಯ

ಯಡಿಯೂರಪ್ಪನವರು ಈ ಸಭೆಯಲ್ಲಿ ನಿರ್ಣಯ ಮಾಡಿ ಕಳಿಸ ಎಂದು ಹೇಳಿದ್ದಾರೆ ಅದೂಸಾಧ್ಯವಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಶಿಕ್ಷಕರು ಕಳೆದ ೫-೬ ದಿವಸಗಳಿಂದ ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾರೆ. ಅನುದಾನ ಕೊಡಬೇಕಾಗಿದೆ ಎಂದು ಸರ್ಕಾರ ಒಪ್ಪಿಕೊಂಡಿದೆ. ಸರ್ಕಾರ ಏಕೆ ಆರ್ಡರ್ ಕೊಟ್ಟಿಲ್ಲವೋ ನನಗೆ ಗೊತ್ತಿಲ್ಲ.....

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ರೈತರಿಗೆ ಸಪೋರ್ಟ್ ಪ್ರೈಸ್ ಕೊಡುತ್ತಿಲ್ಲ. ಬೇರೆ ವಿಷಯಕ್ಕೆ ಹೋಗುವ ಅವಶ್ಯಕತೆ ಇಲ್ಲ. ಸರ್ಕಾರ ಈ ರೀತಿ ಈ ಉತ್ತರ ಕೊಡುವುದು ಸರಿಯಲ್ಲ. ಬೆಂಬಲ ಬೆಲೆಗೆ ಸರ್ಕಾರ ಖರೀದಿ ಮಾಡಬೇಕು. ಜೋಳ, ರಾಗಿ, ಭತ್ತ, ಸೂರ್ಯಕಾಂತಿ ಬೀಜಗಳನ್ನು ಸರ್ಕಾರ ನಿರ್ದಿಷ್ಟ ಬೆಲೆಗೆ ಕೊಳ್ಳುವ ವ್ಯವಸ್ಥೆ ಮಾಡದೆ ಹೋದರೆ ರೈತರಿಗೆ ಅನ್ಯಾಯವಾಗುತ್ತದೆ. ಎನ್.ಸಿ.ಡಿ.ಸಿಯ ಮುಖಾಂತರ ಅಥವಾ ಫೆಡರೇಷನ್ ಮುಖಾಂತರ ಸಹಕಾರ ಸಂಸ್ಥೆಗಳ ಮುಖಾಂತರ ಕನಿಷ್ಠ ಪಕ್ಷ ಬೆಂಬಲ ಬೆಲೆಗೆ ಕೊಳ್ಳುತ್ತೇನೆಂದು ಸರ್ಕಾರ ಇವತ್ತು ಘೋಷಣೆ ಮಾಡಬೇಕು ಈ ಕೂಡಲೇ, ಏನು ವ್ಯವಸ್ಥೆ ಮಾಡುತ್ತೀರಿ ಹೇಳಬೇಕು ಸಹಕಾರ ಸಂಘ ಸಂಸ್ಥೆಗಳಿಗೆ ಅವಶ್ಯಕತೆ ಇರತಕ್ಕಂಥ ಹಣಕಾಸಿನ ವ್ಯವಸ್ಥೆ ಮಾಡಬೇಕು, ಇಲ್ಲದೇ ಹೋದರೆ ರೈತ ಕಂಗೆಟ್ಟಿದ್ದಾನೆ, ಗಂಭೀರ ಸ್ವರೂಪ ತಾಳಿದ್ದಾನೆ. ಒಂದು ಕಡೆ ಕೈಗೆ ಸಿಕ್ಕದಂಥ ಗೊಬ್ಬರದ ರೇಟು, ಇನ್ನೊಂದು ಕಡೆ ಬೆಳೆದ ಮಾಲಿಗೆ ದರ ಸಿಗದೆ ಅಧೋಗತಿಗೆ ಹೋದರೆ ರೈತನನ್ನು ಕೇಳುವವರು ಯಾರು? ಅದಕ್ಕಾಗಿ ದಯವಿಟ್ಟು ಸರ್ಕಾರ ಸ್ಪಷ್ಟವಾಗಿ ತನ್ನ ಹೇಳಿಕೆ ಕೊಡಬೇಕು.

ಶ್ರೀ ಆರ್.ವಿ. ದೇಶಾಪಾಂಡೆ:- ಮುಖ್ಯ ಮಂತ್ರಿಗಳು ನರಗುಂದಕ್ಕೆ ಬಂದಾಗ ಸಾವಿರಾರು ಜನ ರೈತರು ಗೋಧಿ, ಜೋಳದ ರೇಟು ೧೪೦ ಬಂದಿದೆ, ಸಪೋರ್ಟ್ ಪ್ರೈಸ್ ೨೪೦ ಡಿಕ್ಲೇರ್ ಮಾಡಿದ್ದಾರೆ ಆದರೆ ನೀವು ಪರ್ಚೇಸ್ ಮಾಡುತ್ತಾ ಇಲ್ಲ, ಹತ್ತಿ ೭೦೦-೮೦೦ ಬಂದಿದೆ ಸಿ.ಸಿ.ಐ ನವರು ಪರ್ಚೇಸ್ ಮಾಡುತ್ತಾ ಇಲ್ಲ. ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ತಮ್ಮ ಪಬ್ಲಿಕ್ ಸ್ಪೀಚ್‌ನಲ್ಲಿ ನಾನು ರೈತರ ಸಹಾಯಕ್ಕೆ ಬರುತ್ತೇನೆ, ಸಪೋರ್ಟ್ ಪ್ರೈಸ್ ಪ್ರಕಾರ ಮಾರ್ಕೆಟಿಂಗ್ ಫೆಡರೇಷನ್ ಅಥವ ಫುಡ್ ಕಾರ್ಪೋರೇಶನ್ ಖರೀದಿ ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಮುಖ್ಯಮಂತ್ರಿಗಳು ಇನ್ನೂ ನಿರ್ಣಯ ಮಾಡಿಲ್ಲ. ಮಾನ್ಯ ಬನ್ನಿಕೋಡ್‌ರವರು ಏನು ಹೇಳಿದ್ದಾರೆ ಅದು ಬಹಳ ಮಹತ್ವ ವಿಷಯವಾಗಿದೆ. ಇದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಅದಕ್ಕೆ ಅವರು ಉತ್ತರ ಕೊಟ್ಟು ಸೂಕ್ತವಾದ ಪರಿಹಾರ ರೈತರಿಗೆ ಕೊಟ್ಟು ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದರು. ಅದು ಇನ್ನೂ ನಿರ್ಣಯವಾಗಿಲ್ಲ ಅದರ ಬಗ್ಗೆ ಸ್ಪಷ್ಟನೆ ಕೊಡಬೇಕಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಸನ್ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರದಲ್ಲಿ ಸಪೋರ್ಟ್ ಪ್ರೈಸ್ ಇದೆ. ೧೪೦ ಜೋಳ ಇದ್ದದಕ್ಕೆ ೨೪೦ ರೂಪಾಯಿ ಎಂದು ಹೇಳಿದ್ದೀರಿ ಯಾರೂ ಒಂದು ಕ್ವಿಂಟಾಲ್ ತೆಗೆದುಕೊಂಡಿಲ್ಲ, ಹತ್ತಿ ತೆಗೆದುಕೊಂಡಿಲ್ಲ, ಉದ್ದು ತೆಗೆದು ಕೊಂಡಿಲ್ಲ. ಸಪೋರ್ಟ್ ಪ್ರೈಸ್ ಏನು ಸರ್ಕಾರ ಮಾಡಿದ್ದಾರೆ. ರೈತರಿಗೆ ಬಹಳ ತೊಂದರೆ ಆಗಿದೆ. ಇದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ, ಎಷ್ಟು ಹಣ ಬಿಡುಗಡೆ

ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು, ಇದು ನಿರ್ದಿಷ್ಟವಾದ ಪ್ರಶ್ನೆ. ತಾವು ಸಪೋರ್ಟ್ ಪ್ರೈಸ್ ಡಿಕ್ಲೇರ್‌ಮಾಡಿ, ಹಣ ಬಿಡುಗಡೆ ಮಾಡುತ್ತಿರಾ?

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ರೈತ ಮನೆತನದಿಂದ ಬಂದವರು ನಿಮಗೆ ಕಳಕಳಿ ಇದೆ ಎಂದು ಕೊಂಡಿದ್ದೆವು ಅಲ್ಲಿಗೆ ಹೋದ ಮೇಲೆ ಏಕೆ ಹೀಗಾದಿರಿ? ಯಡಿಯೂರಪ್ಪನವರೇ ಬೆಲೆ ಕೊಡುತ್ತೇವೆ, ಹೋಗುತ್ತೇವೆ, ಹತ್ತಿ ಬೆಲೆ ವ್ಯವಸ್ಥೆ ಮಾಡುತ್ತೇವೆ, ಜೋಳ ಖರೀದಿ ಮಾಡುವ ವ್ಯವಸ್ಥೆ ಮಾಡುತ್ತೇವೆ. ನಮ್ಮ ಸರ್ಕಾರ, ರೈತರ ಪರವಾಗಿ ಇದೆ ಎಂದು ಹೇಳಿ ನೀವು ರೈತನ ಮಗನಾಗಿ ಮಾತನಾಡಿ ಸ್ವಾಮಿ, ಸಂಸದೀಯ ಸಚಿವರಾಗಿ ಅಲ್ಲ. ರೈತನ ಮಗನಾಗಿ ರೈತನಿಗೆ ಸರಿಯಾದ ಬೆಲೆ ಕೊಡುವುದಕ್ಕೆ ನಿಮ್ಮ ಕಾರ್ಯಕ್ರಮ ಏನು? ಅದು ಬಿಟ್ಟು ಈ ಸದನದಲ್ಲಿ ಏನು ಚರ್ಚೆ ಆಗಬೇಕು ಸ್ವಾಮಿ? ೧೦೦ಕ್ಕೆ ೭೦ ಜನ ಗ್ರಾಮೀಣ ಜನರು ಬೆಳೆದು ಇಟ್ಟಿರುವಂಥ ಹತ್ತಿ, ರಾಗಿ, ಜೋಳವನ್ನು ಕೊಂಡು ಕೊಳ್ಳಿ ಎಂದು ಭಿಕ್ಷೆ ಬೇಡುವಂಥ ಪರಿಸ್ಥಿತಿ ಇದೆ. ಇದರ ಬಗ್ಗೆ ಚರ್ಚೆ ಮಾಡೋಣ. ದಯಮಾಡಿ ಬೆಂಬಲ ಬೆಲೆ ಕೊಟ್ಟು ನೀವು ಹೇಳಿರುವ ಪ್ರಕಾರ ಖರೀದಿ ಮಾಡುತ್ತೀರ, ಅಥವಾ ಇಲ್ಲ ಎಂದು ಹೇಳಿ ನಾವು ಜನರ ಬಳಿ ಹೋಗುತ್ತೇವೆ, ದಯಮಾಡಿ ಈ ವಿಷಯವನ್ನು ಹಗುರವಾಗಿ ತೆಗೆದುಕೊಳ್ಳಬೇಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬನ್ನಿಕೋಡ್‌ರವರು ಎತ್ತಿದಂಥ ಪ್ರಶ್ನೆ ಗುರುಪಾದಪ್ಪ ನಾಗಮಾರಪಲ್ಲಿಯವರು, ದೇಶಪಾಂಡೆ ಇಬ್ಬರೂ ಎತ್ತಿದಂಥ ಪ್ರಶ್ನೆಗಳು ಈಗಾಗಲೇ ಮುಖ್ಯಮಂತ್ರಿಗಳವರ ಗಮನಕ್ಕೆ ಬಂದಿವೆ. ನಿರ್ಣಯವನ್ನು ತೆಗೆದುಕೊಳ್ಳುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆಂದು ತಿಳಿಸಿದ್ದಾರೆ. ಆದ್ದರಿಂದ ಮುಖ್ಯಮಂತಿಗಳು ಇದ್ದಾಗ ಮಾತನಾಡಿ ಯಾವರೀತಿ ಮಾಡಬೇಕು ಎನ್ನುವುದನ್ನು ಪ್ರಸ್ತಾಪ ಮಾಡಿ, ಚರ್ಚೆ ಮಾಡಿ, ತೀರ್ಮಾನ ತೆಗೆದುಕೊಳ್ಳುವ ಸಂದರ್ಭ ಮುಂದೆ ಬರುತ್ತದೆ, ಆದ್ದರಿಂದ ಈ ವಿಷಯವನ್ನು ನಿಲ್ಲಿಸಿ ಮುಂದೆ ಹೋಗೋಣ.ಅನುದಾನ ರಹಿತ ಖಾಸಗಿ ಮಾಧ್ಯಮಿಕ ಶಾಲೆ ಶಿಕ್ಷಕರ ಸತ್ಯಾಗ್ರಹ.

ಶ್ರೀ ಆರ್.ಎ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಾನು ತಮಗೊಂದು ನೋಟೀಸ್ ಕೊಟ್ಟಿದ್ದೆ ಆ ವಿಚಾರವನ್ನು ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದರು ಇದು ಕಳೆದ ೫-೬ ದಿವಸ ದಿಂದ ಅನುದಾನ ರಹಿತ ಖಾಸಗಿ ಮಾಧ್ಯಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರು ಸ್ಟ್ರೈಕ್ ಮಾಡುತ್ತಿರುವ ವಿಚಾರ ಇದು ಬಹಳ ಗಂಭೀರವಾದ ಸಮಸ್ಯೆ ಸರ್ಕಾರ ಗ್ರಾಂಟ್ ಇನ್ ಏಡ್ ಪ್ರಕಾರ ಗ್ರಾಂಟ್ ಕೊಡಲಿಕ್ಕೆ ಒಪ್ಪಿಕೊಂಡಿದೆ. ಆದರೆ ಈಗ ಸರ್ಕಾರ ಹಿಂದು ಮುಂದು ಏಕೆ ಹೋಗುತ್ತಿದೆಯೋ ಗೊತ್ತಿಲ್ಲ. ನೀವು ಮೇಲಿನ ಮನೆಯಲ್ಲಿ ಸ್ಟೇಟ್‌ಮೆಂಟ್ ಮಾಡಿರಬಹುದು. ಆದರೆ ಅಲ್ಲಿ ಸ್ಪಷ್ಟವಾಗಿ ಏನೂ ಹೇಳಲಿಲ್ಲ. ಮುಖ್ಯ ಮಂತ್ರಿಗಳು ಶಿಕ್ಷಣ ಸಚಿವರು ಆಗಿದ್ದಾಗ ಇದನ್ನು ಅಪ್ರೂವ್ ಮಾಡಿದ್ದಾರೆ. ಆ ಶಿಕ್ಷಕರು ಕಳೆದ ೧೦-೧೨ ವರ್ಷಗಳಿಂದ ಮಾಧ್ಯಮಿಕ ಶಾಲೆಗಳಲ್ಲಿ ಫ್ರೀಯಾಗಿ ಕೆಲಸ ಮಾಡುತ್ತಿದ್ದಾರೆ, ಪೋಸ್ಟ್ ಎಲ್ಲಾ ಅಪ್ರೂವ್ ಆಗಿದೆ. ನೀವು ಅಪ್ರೂವ್‌ಲ್ ಕೊಟ್ಟಿದ್ದೀರಿ. ಕ್ರಿಯೇಷನ್ ಆಗಿದೆ. ಅವರ ನೇಮಕಾತಿ ಕಾಯಿದೆ ಬದ್ಧವಾಗಿ ಆಗಿದೆ. ನಿಮ್ಮ ಅಧಿಕಾರಿಗಳು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಅವರು ಅನುಧಾನರಹಿತರು, ಅನುಧಾನ ಕೊಡಬಹುದು ಅವರು ಎಲಿಜಿಬಲ್ ಆಗಿದ್ದಾರೆಂದು ರೆಕ್‌ಮೆಂಡ್ ಮಾಡಿದ್ದಾರೆ ಆದರೂ ನೀವು ಏಕೆ ಕೊಡುತ್ತಾ ಇಲ್ಲ ಎಂದು ನನಗೆ ಗೊತ್ತಾಗುತ್ತಿಲ್ಲ. ಕಳೆದ ಆರು ದಿನಗಳಿಂದ ಅವರು ಇಂಡೆಫೆನೇಟ್ ಆಗಿ ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾರೆ. ಯಾವಾಗ ಗ್ರಾಂಟ್‌ನ್ನು ನೀವು ಮಂಜೂರು ಮಾಡುತ್ತೀರೆಂದು ಸ್ಪಷ್ಟವಾಗಿ ಹೇಳಬೇಕೆಂದು ಸಭಾಧ್ಯಕ್ಷರ ಮುಖಾಂತರ ತಮಗೆ ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಇದರ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಕಳೆದ ೬ ದಿವಸಗಳಿಂದ ಉಪಾಧ್ಯಾಯರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ, ಕೆಲವರು ಆಸ್ಪತ್ರೆಗೆ ಸೇರಿದ್ದಾರೆ. ಈ ಸರ್ಕಾರ ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ನೀತಿಯನ್ನು ಅನುಸರಿಸುತ್ತಿದೆ. ೧೬೦ ಪ್ರಾಥಮಿಕ ಶಾಲೆಗಳಿಗೆ ನವೆಂಬರ್ ತಿಂಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಿದ್ದೀರಿ. ಅವರು ಕಳೆದ ೧೦-೧೨ ವರ್ಷಗಳಿಂದ ಪುಕ್ಕಟೆಯಾಗಿ ಕೆಲಸ ಮಾಡುತ್ತಿದ್ದಾರೆ. ಬೇರೆ ಭಾಷೆಯ ಶಾಲೆಗಳಿಗೂ ತಾವು ಅನುದಾನವನ್ನು ಕೊಟ್ಟಿದ್ದೀರಿ. ಆದರೆ ಕನ್ನಡಿಗರು ಇರತಕ್ಕ ಶಾಲೆಗಳಿಗೆ ತಾವು ಅನುದಾನವನ್ನು ಕೊಟ್ಟಿಲ್ಲ. ಈ ಶಾಲೆಗಳಿಗೆ ಶೀಘ್ರವಾಗಿ ಬಿಡುಗಡೆ ಮಾಡುತ್ತೇವೆಂದು ನೀವು ಹೇಳಿರತಕ್ಕದು ಪತ್ರಿಕೆಗಳಲ್ಲಿ ಬಂದಿದೆ. ಶೀಘ್ರವಾಗಿ ಎಂದರೆ ನಿರ್ದಿಷ್ಟವಾಗಿ ೧೫ ದಿವಸದಲ್ಲೋ ೧ ತಿಂಗಳಲ್ಲೋ, ೨ ತಿಂಗಳಲ್ಲೋ ಯಾವತ್ತು ಅನುದಾನವನ್ನು ಬಿಡುಗಡೆ ಮಾಡುತ್ತೀರೆಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಕೆಲವು ಶಾಲೆಗಳಿಗೆ ಅನುದಾನವನ್ನು ಕೊಟ್ಟಿದ್ದೀರಿ. ಆ ಮನೆಯಲ್ಲಿ ಇದು ಪ್ರಸ್ತಾಪ ಆದಾಗ ಸ್ಟೇಟ್‌ಮೆಂಟ್‌ನ್ನು ಮಾಡುತ್ತೇವೆಂದು ಹೇಳಿದಿರಿ. ಆದರೆ ಇದುವರೆಗೂ ಸ್ಟೇಟ್‌ಮೆಂಟನ್ನು ಮಾಡಲಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ, ಅಮರಣಾಂತ ಉಪವಾಸವನ್ನು ಮಾಡುತ್ತಿರುವ ಆ ಶಿಕ್ಷಕರ ನೆರವಿಗೆ ಬರತಕ್ಕದ್ದು ಈಗ ಅಗತ್ಯವಿದೆ. ನೀವು ಹೋಗಿ ಅವರನ್ನು ಭೇಟಿ ಮಾಡಿಲ್ಲ. ಈ ಸರ್ಕಾರ ಎಲ್ಲಿದೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತೇ ಅವರನ್ನು ಭೇಟಿ ಮಾಡಿ ಅವರ ನೆರವಿಗೆ ನೀವು ಬರಬೇಕು. ಅವರ ಉಪವಾಸವನ್ನು ತಪ್ಪಿಸಬೇಕು.

ಶ್ರೀ ವಾಟಾಳ್ ನಾಗರಾಜ್:- ನೀವು ಅವರನ್ನು ಕರೆದಿಲ್ಲ.

ಅಧ್ಯಕ್ಷರು:- ನಾನು ಅವರಿಗೆ ಡೈರೆಕ್ಷನ್ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ:- ಈ ಸರ್ಕಾರ ತಾರತಮ್ಯ ಮಾಡಿದೆ. ಒಂದೇ ನಿಯಮದ ಪ್ರಕಾರ ನೇಮಕವಾಗಿರತಕ್ಕ ಶಾಲೆಗಳ ಒಂದು ದೊಡ್ಡ ಪಟ್ಟಿ ಇದೆ. ಆ ಪಟ್ಟಿಯಲ್ಲಿರತಕ್ಕ ಕೆಲವು ಶಾಲೆಗಳಿಗೆ ಅಂದರೆ ನಾನು ಈಗಾಗಲೇ ಹೇಳಿದಂತೆ ಇವರಿಗೆ ಬೇಕಾದ ಶಾಲೆಗಳಿಗೆ, ಇವರಿಗೆ ಖುಷಿ ಬಂದ ಶಾಲೆಗಳಿಗೆ ಮಾತ್ರ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಇದಕ್ಕೆ ಕಾರಣವೇನು? ರೋಸ್ಟರ್‌ನ್ನು ಫಾಲೋ ಮಾಡಿಲ್ಲವೆಂದು ಈಗ ಒಂದು ನೆಪವನ್ನು ಹೇಳುತ್ತಿದ್ದಾರೆ. ನೇಮಕಾತಿಯನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದರು? ಅವರು ಇದನ್ನು ಅಪ್ರೂವ್ ಮಾಡಿದ್ದಾರೆ. ನೇಮಕಾತಿ ಆಗುವಾಗ ಇಲಾಖೆಯ ಅಧಿಕಾರಿಗಳೇ ಹೋಗಿದ್ದಾರೆ. ನೇಮಕಾತಿ ಸಮಿತಿಯಲ್ಲಿ ಕುಳಿತಿದ್ದಾರೆ. ಸಮಿತಿಯು ಮಾಡಿದಂಥ ಶಿಫಾರಸನ್ನು ಸರ್ಕಾರ ಒಪ್ಪಿಕೊಂಡಿದೆ, ಅನುಮೋದನೆ ಮಾಡಿದೆ. ಸುಮಾರು ೮೦೦ ಉಪಾಧ್ಯಾಯರು ಇದ್ದಾರೆ. ಇವರಿಗೆ ಖುಷಿಬಂದವರಿಗೆ ಅನುದಾನವನ್ನು ಬಿಡುಗಡೆ ಮಾಡುತ್ತಾರೆ. ಖುಷಿ ಬರದಿದ್ದರೆ ಅನುದಾನವನ್ನು ಕೊಡುವುದೇ ಇಲ್ಲ. ಅಮರಣಾಂತ ಉಪವಾಸವನ್ನು ಮಾಡುತ್ತಿರುವ ಉಪಾಧ್ಯಾಯರ ಪೈಕಿ ೨-೩ ಜನರು ಆಸ್ಪತ್ರೆಗೆ ಸೇರಿದ್ದಾರೆ. ಇವರ ಖುಷಿಯ ಪ್ರಕಾರ ಸರ್ಕಾರವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ನೀತಿ, ನಿಯಮ, ಕಾನೂನು ಇದೆ. ಅದರ ಪ್ರಕಾರ ಇವರು ಆಡಳಿತ ಮಾಡಬೇಕಾಗುತ್ತದೆ. ಕಾನೂನು ಪ್ರಕಾರಮಾಡಿಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವರನ್ನು ಏತಕ್ಕೆ ಹಾಗೆ ಬಿಟ್ಟುಕೊಂಡಿದ್ದೀರಿ. ಈಗಾಗಲೇ ನಾನು

ಹೇಳಿದಂತೆ ಇವರು ಖುಷಿ ಬಂದಂತೆ ಆಡಳಿತ ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರಕ್ಕೆ ತನ್ನ ಕಪಿ ಮುಷ್ಠಿಯನ್ನು ಬಿಟ್ಟು ಈ ಉಪಾಧ್ಯಾಯರಿಗೆ ಪರಿಹಾರವನ್ನು ಕೊಡಬೇಕು. ರೋಸ್ಟರ್ ಪ್ರಕಾರ ಮಾಡಿಕೊಂಡಿಲ್ಲದಿದ್ದರೆ ಮುಂದೆ ನೇಮಕಾತಿಯನ್ನು ಮಾಡಿಕೊಳ್ಳುವಾಗ ಇದನ್ನು ಸರಿಪಡಿಸಿಕೊಳ್ಳಲಿ. ಮುಂದೆ ಇನ್ನೂ ನೇಮಕಾತಿಯನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಅನುದಾನ ಇಲ್ಲದೇ ಇರತಕ್ಕ ಉಪಾಧ್ಯಾಯರಿಗೆ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ:- ಈ ಶಾಲೆಗಳು ಪ್ರಾರಂಭವಾದುದು ಸರ್ಕಾರದ ಅನುಮತಿಯನ್ನು ಪಡೆದುಕೊಂಡನಂತರ ಇದು ಅನಧಿಕೃತ ಶಾಲೆಗಳೇನೂ ಅಲ್ಲ. ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಂಡು ಪ್ರಾರಂಭವಾಗಿವೆ, ಪೋಸ್ಟ್‌ಗಳು ಅಪ್ರೂವ್ ಆಗಿವೆ. ವಿದ್ಯಾ ಇಲಾಖೆಯವರು ನೇಮಕಾತಿಯನ್ನೂ ಕೂಡ ಅಪ್ರೂವ್ ಮಾಡಿದ್ದಾರೆ. ರೂಲ್ಸ್ ಪ್ರಕಾರ ಇದೆ, ರೋಸ್ಟರ್ ಪ್ರಕಾರ ಇದೆ ಎಂದು ವಿದ್ಯಾ ಇಲಾಖೆಯವರು ಒಮ್ಮೆ ಅನುಮೋದನೆ ಮಾಡಿ ಈಗ ರೋಸ್ಟರ್ ಫಾಲೋ ಮಾಡಿಲ್ಲ ಎಂದು ಹೇಳತಕ್ಕದ್ದು ತಪ್ಪಾಗುತ್ತದೆ. ಅವರು ರೋಸ್ಟರ್‌ನ್ನು ಫಾಲೋ ಮಾಡಿಲ್ಲದಿದ್ದರೆ ಇನ್ನುಮುಂದೆ ನೇಮಕಾತಿಯನ್ನು ಮಾಡಿಕೊಳ್ಳುವಾಗ ಬ್ಯಾಕ್‌ಲಾಗನ್ನು ಸರಿಪಡಿಸಿಕೊಳ್ಳಬಹುದು. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಅಪ್ರೂವಲ್‌ನ್ನು ಕೊಡಲೇಬೇಕು. ಏಕೆಂದರೆ ಕಳೆದ ೭-೮ ವರ್ಷಗಳಿಂದ ಇವರು ಪುಕ್ಕಟೆಯಾಗಿ ದುಡಿಯುತ್ತಿದ್ದಾರೆ. ಇದೇರೀತಿ ಇವರು ಇನ್ನು ಎಷ್ಟು ದಿವಸ ಪುಕ್ಕಟೆ ದುಡಿಯಬೇಕು?

೧.೩೦ ಪಿ.ಎಂ

ಹ್ಯೂಮಾನ್‌ಟೇರಿಯನ್ ಕನ್‌ಸಿಡರೇಷನ್ ಮೇಲೆ ತಾವು ಗ್ರಾಂಟ್‌ನ್ನು ಕೊಡಲೇಬೇಕು. ಈಗಾಗಲೇ ಅವರು ಹಂಗರ್ ಸ್ಟ್ರೈಕ್ ಕುಳಿತಿದ್ದಾರೆ.

ಡಾ. ಹೆಚ್.ಡಿ. ಲಮಾಣಿ:- ಸನ್ಮಾನ್ಯ ಅಧ್ಯಕ್ಷರೇ ಇದು ನಾನು ಅಧಿಕಾರಕ್ಕೆ ಬಂದಮೇಲೆ ಆ ಅಧ್ಯಾಪಕರು ಬಂದು ನನ್ನನ್ನು ಭೇಟಿ ಮಾಡಿದ್ದರು. ನಾನು ಅವರಿಗೆ ಇರತಕ್ಕಂಥ ಪರಿಸ್ಥಿತಿಯನ್ನು ವಿವರಿಸಿದ್ದೇನೆ. ನಾನು ಫೈಲನ್ನು ತರಿಸುತ್ತೇನೆ, ತರಿಸಿದನಂತರ ವಿಚಾರ ಮಾಡಿ ನಿಮಗೆ ಒಳ್ಳೆಯದಾಗುವಹಾಗೆ ನಾನು ಏನಾದರೂ ಒಂದು ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳಿದ್ದೇನೆ. ಮತ್ತು ಎಲ್ಲಾ ಪರಿಸ್ಥಿತಿಯನ್ನು ವಿವರಿಸಿದ್ದೇನೆ. ಇಷ್ಟಾದರೂ ಸಹಿತ ಅವರು ಈ ರೀತಿಯಲ್ಲಿ ಉಪವಾಸ ಸತ್ಯಾಗ್ರಹವನ್ನು ಕುಳಿತಿದ್ದಾರೆ. ಇದು ಒಂದು ದುರಾದೃಷ್ಟಕರವಾದ ಸಂಗತಿ. ನಾನು ಈಗಾಗಲೇ ಕೌನ್ಸಿಲ್ ನಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಇದರಲ್ಲಿ ಏನಾಗಿದೆ ಎಂದರೆ ಅವೆಲ್ಲಾ ಹಳೆಯ ಹೈಸ್ಕೂಲುಗಳು. ೧೯೮೨-೮೩-೮೪ ಮತ್ತು ೮೬ರಲ್ಲಿ ಆ ಕಾಲದಲ್ಲಿ ಕೊಟ್ಟಂಥ ಹೈಸ್ಕೂಲುಗಳು. ಇವುಗಳಲ್ಲಿ ರೋಸ್ಟರ್ ಪದ್ಧತಿಯನ್ನು ಅವರು ಜಾರಿಗೆ ತರಲಿಲ್ಲ. ರೋಸ್ಟರ್ ಪದ್ಧತಿಯನ್ನು ಉಲ್ಲಂಘನೆ ಮಾಡಿದ್ದಾರೆ. ಕೆಲವೊಂದು ಹೈಸ್ಕೂಲುಗಳಲ್ಲಿ ಏನಾಗಿದೆ ಎಂದರೆ...

ಶ್ರೀ ವಾಟಾಳ್ ನಾಗರಾಜ್:- ಅವರಿಗೆ ಬಹಳ ವರ್ಷಗಳ ಹಿಂದೆಯೇ ಅಪ್ರೂವಲ್ ಕೊಟ್ಟಿದ್ದಾರೆ.

(ಗೊಂದಲ)

ಅವರಿಗೆ ಬೇಕಾದವರಿಗೆ ಕೊಟ್ಟಿದ್ದಾರೆ. ಈರೀತಿ ಕೊಡಬೇಕಾದರೆ ಒಂದು ನೀತಿಯನ್ನು ಅನುಸರಿಸುತ್ತಿಲ. ದಯವಿಟ್ಟು ಹಾರಿಕೆಯ ಉತ್ತರವನ್ನು ಕೊಡಬೇಡಿ. ಇಷ್ಟನೆಯ ತಾರೀಖಿನೊಳಗೆ ಅನುದಾನವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿ. ರೋಸ್ಟರ್ ಪದ್ಧತಿ ಉಲ್ಲಂಘನೆ ಯಾಗಿದ್ದರೆ ಅದಕ್ಕೆ ಯಾರು ಜವಾಬ್ದಾರರು?

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೊಡ್:- ಸರ್ಕಾರದ ತಪ್ಪುನೀತಿಯಾಗಿದ್ದರೆ ಯಾರು ಜವಾಬ್ದಾರರು. ಅಪ್ರೂವಲ್ ಕೊಡುವಾಗ ಅನುದಾನ ಕೊಡುವಾಗ ಅನುದಾನ ಕೊಡುವಂಥ ಮಾತು ಹೇಳುವಾಗ ಈ ಪ್ರಶ್ನೆ ಬರುವುದಿಲ್ಲ. ಅಪ್ರೂವಲ್ ಕೊಡುವಾಗ ಅದನ್ನು ನೋಡಬೇಕಾಗಿತ್ತು. ಹಣವನ್ನು ಬಿಡುಗಡೆ ಮಾಡಲಿಕ್ಕೆ ಎಫ್.ಡಿ. ಒಪ್ಪಿಕೊಂಡಿದೆ. ೬೬ ಪ್ರೌಢಶಾಲೆಗಳಿಗೆ ಎಫ್.ಡಿ.ಯವರು ಒಪ್ಪಿಕೊಂಡು ಮೇಲೆ ಹಣವನ್ನು ಬಿಡುಗಡೆ ಮಾಡಲಿಕ್ಕೆ ಆಗುವುದಿಲ್ಲವೆನ್ನುವ ಪ್ರಶ್ನೆ ತರುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ರೋಸ್ಟರ್ ಪದ್ಧತಿಯನ್ನು ಉಲ್ಲಂಘನೆ ಮಾಡಿದರೆ ಅದಕ್ಕೆ ಕೆಲಸ ಮಾಡತಕ್ಕಂಥ ಶಿಕ್ಷಕರು ಜವಾಬ್ದಾರರೆ? ಹಾಗಿದ್ದಮೇಲೆ ಕೆಲವು ಶಾಲೆಗಳಿಗೆ ಅನುದಾನವನ್ನು ಏತಕ್ಕೆ ಕೊಟ್ಟಿರಿ?

ಡಾ.ಹೆಚ್.ಡಿ. ಲಮಾಣಿ:- ನಾನು ಹೇಳುವುದಕ್ಕೆ ಅವಕಾಶ ಕೊಡಿ. ಆ ಸಮಯದಲ್ಲಿ ಅನುದಾನಕ್ಕೆ ಒಳಪಡಬೇಕಾದರೆ, ಮಾನ್ಯತೆ ಕೊಡಬೇಕಾದರೆ, ರೋಸ್ಟರ್ ಪದ್ಧತಿಯನ್ನು ಕೇಳಿದಾಗ ನಾವು ಅದನ್ನೆಲ್ಲ ಸರಿಮಾಡಿಕೊಳ್ಳುತ್ತೇವೆ, ಗ್ರಾಂಟನ್ನು ಕೊಡಬೇಕೆಂದು ಮ್ಯಾನೇಜ್‌ಮೆಂಟ್‌ನವರು ಹೇಳಿದರು. ಈ ಮ್ಯಾನೇಜ್‌ಮೆಂಟ್‌ನವರು ಏನು ಮಾಡಿದ್ದಾರೆಂದರೆ ಈಗ ಹಿಂದೆ ಸರಿದುಬಿಟ್ಟಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ನನ್ನದೊಂದು ಕ್ರಿಯಾಲೋಪ, ಅಪಾಯಿಂಟ್ ಮಾಡಿ ಅಪ್ರೂವಲ್ ಕೊಡುವಾಗ ಈರೀತಿ ನಿಯಮವಿತ್ತೆ.

ಅಧ್ಯಕ್ಷರು:- ಮಾನ್ಯ ಸದಸ್ಯರಿಗೆ ಹೇಳುತ್ತೇನೆ ನಾನು ಯಾರಿಗೆ ಕರೆಯುತ್ತೇನೆ ಮಾತನಾಡಲಿಕ್ಕೆ ದಯವಿಟ್ಟು ಅವರೇ ಮಾತನಾಡಬೇಕು. ಉಳಿದವರು ಮಾತನಾಡಿದರೆ ಯಾವುದು ರೆಕಾರ್ಡಿಗೆ ಹೋಗುವುದಿಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಮಂತ್ರಿಗಳು ಏನು ಸಲಹೆ ಹೇಳುತ್ತಾರೆ ಅದನ್ನು ಕೇಳಿಕೊಳ್ಳಿ ತಮಗೆ ಮತ್ತೆ ಕೇಳಿಕೊಳ್ಳುವುದಿದ್ದರೆ ಕಾಲಾವಕಾಶ ಮಾಡಿಕೊಡುತ್ತೇನೆ. ಈರೀತಿಯಾದರೆ ಕಷ್ಟವಾಗುತ್ತದೆ.

ಶ್ರೀ ಡಾ. ಹೆಚ್.ಡಿ. ಲಮಾಣಿ:- ಅನುದಾನ ಪಡೆಯುತ್ತಿರುವ ಹೈಸ್ಕೂಲುಗಳವರು ರೆಗ್ಯುಲರೈಸ್ ಮಾಡುವ ಸಲುವಾಗಿ ಕೇಳಿಕೊಂಡರು. ಆಗ ಅವರಿಗೆ ಗ್ರಾಂಟ್‌ನ್ನು ಕೊಡಲು ಒಪ್ಪಿಕೊಂಡಿದ್ದೆವು. ಇದರಲ್ಲಿ ಏನಾಗಿದೆ ಎಂದರೆ ಕೆಲವೊಂದು ನೂನ್ಯತೆಗಳು ಕಂಡುಬಂದವು. ಕೆಲವೊಂದು ಹೈಸ್ಕೂಲ್‌ಗಳವರು ಸಂಪೂರ್ಣವಾದ ಮಾಹಿತಿಯನ್ನು ಕೊಡಲಿಲ್ಲ. ೬೬ ಹೈಸ್ಕೂಲ್‌ಗಳಲ್ಲಿ ಸುಮಾರು ೬೬ ಹೈಸ್ಕೂಲ್‌ಗಳವರು ಸಂಪೂರ್ಣವಾದ ಮಾಹಿತಿಯನ್ನು ಕೊಡಲಿಲ್ಲ. ಆ ಸಮಯದಲ್ಲಿ ಅದಷ್ಟು ಬೇಗ ಕೊಡುತ್ತೇವೆಂದು ಹೇಳಿದರು. ಆದರೆ ಇದುವರೆಗೆ ಅವರು ಮಾಹಿತಿಯನ್ನು ಕೊಡಲಿಲ್ಲ. ಕೆಲವೊಂದು ಮೈನಾರಿಟೀಸ್, ಎಸ್‌ಸಿ. ಹೈಸ್ಕೂಲ್‌ಗಳು ಇಂಥ ಸಂಸ್ಥೆಗಳು ಏನಿದಾವೆ ಅಂಥದಕ್ಕೆ ಎಂದರೆ ೭ ಹೈಸ್ಕೂಲ್‌ಗಳಿಗೆ ನಾನು ಬಂದನಂತರ ಅನುದಾನವನ್ನು ಬಿಡುಗಡೆ ಮಾಡಿದ್ದೇನೆ. ಅದಾದನಂತರ ೧೯೮೭ನೇ ಇಸವಿಗಿಂತಮೊದಲು, ಆ ಹೈಸ್ಕೂಲ್‌ಗಳು ನಾವು ಮಾನ್ಯತೆ ಮಾಡಬೇಕಾದರೆ, ಅನುದಾನ ಕೊಡಬೇಕೆಂದರೆ ರೋಸ್ಟರ್ ಪದ್ಧತಿಯನ್ನು ಅವರು ಅನುಸರಿಸಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಕನ್ನಡೇತರರಿಗೆ ಕೊಟ್ಟಿದ್ದೀರಿ.

ಡಾ. ಹೆಚ್.ಡಿ. ಲಮಾಣಿ:- ಇಲ್ಲ, ಇಲ್ಲ, ನಾನು ಪೂರ್ಣವಾಗಿ ಹೇಳಿಬಿಡುತ್ತೇನೆ. ನಾವು ಏನು ಮಾಡಿದ್ದೇವೆಂದು ಹೇಳುತ್ತೇನೆ. ಅವರು 'ನಿಲ್' ರಿಪೋರ್ಟ್ ತರಬೇಕಾಗಿತ್ತು.

ತಂದಿದ್ದಾರೆ. ರೋಸ್ಟರ್ ಪದ್ಧತಿಯನ್ನು ಸ್ಟ್ರಿಕ್ಟ್ ಆಗಿ ಫಾಲೋ ಮಾಡುತ್ತಿರುವುದು ೧೯೯೦ ರಿಂದೀಚೆಗೆ. ೧೯೮೭ ಕ್ಕಿಂತ ಮೊದಲು ರೋಸ್ಟರ್ ಪದ್ಧತಿಯಲ್ಲಿ ನಿಲ್ ರಿಪೋರ್ಟ್ ತಂದರೆ ಹೈಸ್ಕೂಲ್ ಕೊಡಬೇಕೆಂದು ಕಾನೂನು ಇದೆ. ಆ ಕಾನೂನು ಪ್ರಕಾರ ೬೬ ಹೈಸ್ಕೂಲುಗಳಿಗೆ ಅನುದಾನ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ನಿನ್ನೆ ಕೌನ್ಸಿಲ್‌ನಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಇನ್ನು ಎಲ್ಲ ಹೈಸ್ಕೂಲುಗಳಿಗೆ ಏನು ನ್ಯೂನತೆಗಳಿವೆ ಅದನ್ನು ಸರಿಪಡಿಸಿಕೊಂಡು ವಿವರಣೆ ತೆಗೆದು ಕೊಂಡು ಬಂದರೆ ಆದಷ್ಟು ಬೇಗ ಅನುಕೂಲ ಒದಗಿಸಿಕೊಡುತ್ತೇವೆ. ೬ ತಿಂಗಳು ವರ್ಷ, ಎರಡು ವರ್ಷ ಎಂದು ಹೇಳುತ್ತಿಲ್ಲ. ಅವರಿಂದ ವಿವರಣೆ ಪಡೆದುಕೊಂಡು ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇವೆ. ನಿನ್ನೆಯೂ ಕೂಡ ನಾನು ನಮ್ಮ ಅಧ್ಯಾಪಕರುಗಳು ಏನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಅವರಿಗೆ ಮನವಿ ಮಾಡಿದ್ದೇನೆ. ದಯವಿಟ್ಟು ಉಪವಾಸ ನಿಲ್ಲಿಸಿ, ನೀವು ಸ್ವಲ್ಪ ದಿನಗಳಲ್ಲಿ, ಒಂದು ತಿಂಗಳೊಳಗೆ ಆ ವಿವರಣೆಗಳನ್ನು ನಮಗೆ ಕೊಟ್ಟರೆ ನಾವು ಅನುದಾನ ಬಿಡುಗಡೆ ಮಾಡುವಂಥ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೇನೆ. ಅವರು ವಿವರಣೆಗಳನ್ನು ಕೊಡಬೇಕಾಗುತ್ತದೆ. ಈ ಸದನದ ಮೂಲಕ ಅವರಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತಿದ್ದೇನೆ, ತಾವು ಶ್ರೇಷ್ಠ ಹುದ್ದೆಯಲ್ಲಿರುವವರು. ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿದೆ. ಪರೀಕ್ಷೆ ಬರುತ್ತಿದೆ, ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿ ತಮ್ಮ ತಮ್ಮ ಕೆಲಸಗಳಿಗೆ ಹೋಗಬೇಕು, ನಾನು ಅವರಿಗೆ ಅನುಕೂಲತೆ ಮಾಡಿಕೊಡುತ್ತೇನೆಂದು ಈ ಸದನದ ಮೂಲಕ ಅವರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ವಿವರಣೆ ಸಾಧುವಾಗಿರಬೇಕು. ಕೊಡಲಾರದ ವಿವರಣೆಗಳನ್ನು ಕೇಳಿದರೆ ಒಂದು ತಿಂಗಳಲ್ಲಿ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು. ಸ್ಕೂಲ್ ಕೊಡುವಾಗ ಯಾವ ಕಂಡೀಷನ್ ಇರುತ್ತದೆ ಆ ಪ್ರಕಾರ ಆಗುತ್ತದೆ.

ನಿಲುವಳಿ ಸೂಚನೆ

ವಿಷಯ:- ರಾಜ್ಯದ ರೇಷ್ಮೆ ಬೆಲೆಯಲ್ಲಿ ಕುಸಿತ

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):- ಮಾನ್ಯ ಅಧ್ಯಕ್ಷರೆ, ಯಾವ ಸಮಸ್ಯೆಗಳಿಗೆ ಅಗ್ರಸ್ಥಾನ ಸಲ್ಲಬೇಕೋ ಅವರಿಗೆ ಕೊನೆಯಪಕ್ಷ ಕೊನೆಯಸ್ಥಾನ ಸಲ್ಲಿದ್ದುದು ಸಂತೋಷ. ಅಧ್ಯಕ್ಷರು ರೈತರ ಸಮಸ್ಯೆ ಎತ್ತಲಿಕ್ಕೆ ನನಗೆ ಅವಕಾಶ ಮಾಡಿ ಕೊಟ್ಟದ್ದಕ್ಕೆ ನಾನು ಅವರಿಗೆ ವಂದಿಸುತ್ತೇನೆ. ಈ ದಿವಸ ಈ ರಾಜ್ಯದ ರೇಷ್ಮೆ ಉದ್ಯಮ ರಾಷ್ಟ್ರದ ರೇಷ್ಮೆ ಉದ್ಯಮವಾಗುತ್ತಿದೆ. ಏಕೆಂದರೆ ಭಾರತ ದೇಶಕ್ಕೆ ರೇಷ್ಮೆ ಉದ್ಯಮದಲ್ಲಿ ಕರ್ನಾಟಕದ ಕೊಡುಗೆ ಅಥವಾ ದೇಣಿಗೆ ಅತ್ಯಂತ ಹೆಚ್ಚಿನದು. ಕರ್ನಾಟಕ ಯಾವುದಾದರೂ ವಿಷಯದಲ್ಲಿ ಪ್ರಥಮ ಸ್ಥಾನದಲ್ಲಿದ್ದರೆ ಅದು ರೇಷ್ಮೆ ಉದ್ಯಮದಲ್ಲಿ. ಈ ಉದ್ಯಮ ಮಾಡುವ ಜನಗಳು ಅತ್ಯಂತ ಸಂಕಷ್ಟಕ್ಕೆ ಸಿಲುಕಿರುವಂಥ ಸಂದರ್ಭದಲ್ಲಿ ಅದನ್ನು ನಿವಾರಣೆಮಾಡಲಿಕ್ಕೆ ಈ ಸದನದ ಮೂಲಕ ಮತ್ತು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುವುದಕ್ಕೆ ನಾವು ಈ ನಿಲುವಳಿ ಸೂಚನೆಯನ್ನು ತಂದಿದ್ದೇವೆ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದಂತೆ ಸುಮಾರು ಹತ್ತು ಲಕ್ಷ ಕುಟುಂಬಗಳು ಈ ಉದ್ಯಮವನ್ನು ಆಧಾರ ಮಾಡಿಕೊಂಡು ಭಾರತ ದೇಶದಲ್ಲಿ ಜೀವನ ಮಾಡುತ್ತಿವೆ. ಕರ್ನಾಟಕದಲ್ಲಿ ೩-೪ ಲಕ್ಷ ಕುಟುಂಬಗಳು ರೇಷ್ಮೆ ಉದ್ಯಮದಿಂದ ಬದುಕುತ್ತಿವೆ. ಅದರಲ್ಲೂ ಕೆಲವು ಜಿಲ್ಲೆಗಳಲ್ಲಿ ಬಡವರಿಗೆ ಎರಡು ಹೊತ್ತಿನ ಅನ್ನ, ಮೈಗೆ ಬಟ್ಟೆ ದೊರಕಿಸಿಕೊಡುವಂಥ ಒಂದೇ ಉದ್ಯಮ ಅಂದರೆ ರೇಷ್ಮೆ ಉದ್ಯಮ. ಇಂಥ ಉದ್ಯಮಕ್ಕೆ ಇತ್ತೀಚಿನ ವರ್ಷಗಳಲ್ಲಿ ಮಾರಿಯಂಥ ರೋಗ ಬಂದು ಬೆಳೆಗಾರರಿಗೆ ಮತ್ತು ಉದ್ದಿಮೆಗೆ ಹೆಚ್ಚಿನ ತೊಂದರೆ ಕೊಟ್ಟದ್ದು ನಿಜ. ಈ ತೊಂದರೆಯನ್ನು ನಿವಾರಣೆ ಮಾಡಿ ಸರ್ಕಾರ ಮತ್ತು ಇಲಾಖೆಯವರು ಉದ್ಯಮವನ್ನು